ಶಿವಾನುಭವ ಗ್ರಂಥಮಾಲಾ ನಂ॥ ೨೧

# ಕೈ. ವಾ. ಚನ್ನಬಸಪ್ಪ ಬಸಲಿಂಗಪ್ಪ
# ಧಾರವಾಡ
## ಇವರ ಚರಿತ್ರೆಯು.


ಸಂಪಾದಕರು.

**ರಾ॥ ಸಾ॥ ಫ. ಗು. ಹಳಕಟ್ಟಿ**

ಬಿ. ಏ. ಎಲ್. ಎಲ್. ಬಿ. ವಕೀಲ



ಗ್ರಂಥಾಲಯ
ವಿಜಯಪುರ
-586103



ಗ್ರಂಥಾಲಯ



**ವಿಜಾಪುರ.**

ಬೆಲೆ. ೪ ಆಣೆ.



(ಈ ಗ್ರಂಥದ ಸ್ವಾಮಿತ್ವವು ಕಾದಿಡಲ್ಪಟ್ಟಿದೆ)

## ಪ್ರಸ್ತಾವನೆ.

### ೨ ನೇ ಆವೃತ್ತಿ.

೧೬ ವರ್ಷಗಳ ಹಿಂದೆ ಈ ಚರಿತ್ರೆಯ ೧ ನೇ ಆವೃತ್ತಿಯು ಪ್ರಸಿದ್ಧಿಸಲ್ಪಟ್ಟಿತ್ತು. ಅದರ ಪ್ರತಿಗಳು ಈಗ ಸಿಗುವದಿಲ್ಲಾದ್ದರಿಂದಲೂ ಚನ್ನಬಸವಪ್ಪನವರ ಚರಿತ್ರೆಯನ್ನು ಈಗಿನ ಕಾಲಕ್ಕೆ ಕರ್ನಾಟಕದ ಅಭಿಮಾನಿಗಳು ಅರಿಯುವದು ಅವಶ್ಯ ತೋರಿದ್ದರಿಂದಲೂ ಮೊದಲಿನ ಆವೃತ್ತಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿ ತಿದ್ದಿ ಈ ಎರಡನೇ ಆವೃತ್ತಿಯನ್ನು ಪ್ರಸಿದ್ಧಿಸಿದ್ದೇವೆ. ಆದರೆ ಇದರಲ್ಲಿಯ ವಿಷಯಗಳಲ್ಲಿ ಯಾವ ಹೆಚ್ಚುಕಡಿಮೆ ಮಾಡಿಲ್ಲ.

ತಾ. ೨೪—೪—೩೦ ಫ. ಗು. ಹ.

## ಪ್ರಸ್ತಾವನೆ.

### (೧ ನೇ ಆವೃತ್ತಿ.)

೧೯೧೧ ನೇ ಇಸವಿಯ ಡಿಸೆಂಬರ ತಿಂಗಳಿನಲ್ಲಿ ವಿಜಾಪುರದಲ್ಲಿ ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿಯು ನೆರೆದ ಕಾಲಕ್ಕೆ ಸಾಂಪ್ರತ ಮತ್ತು ಪ್ರಾಚೀನ ಕಾಲದಲ್ಲಿ ಆಗಿಹೋದ ವೀರಶೈವ ಮಹಾಪುರುಷರ ಚರಿತ್ರೆಗಳನ್ನು ಬರೆಯಿಸುವ ಬಗ್ಗೆ ಚರ್ಚೆಯು ಹೊರಟಿತ್ತು. ಆಗ ಚನ್ನಬಸವಪ್ಪನವರು ಕರ್ನಾಟಕದಲ್ಲಿ ವಿದ್ಯಾಪ್ರಸಾರ ಮಾಡಲಿಕ್ಕೆ ಮೊದಲು ಬಹು ಪರಿಶ್ರಮ ಪಟ್ಟವರಿರುವದರಿಂದ ಇವರ ಚರಿತ್ರೆಯನ್ನು ಬರೆಯಿಸುವದು ಅವಶ್ಯವೆಂದು ಕೆಲವರು ಸೂಚಿಸಿದರು. ಆಗ ವಿಜಾಪುರದ ಲಿಂಗಾಯತ ಜಿಲ್ಲಾ ಸಭೆಯವರು ಈ ಕಾರ್ಯಕ್ಕೆ ಉತ್ತೇಜನ ಕೊಡಬೇಕೆಂದು ಯೋಚಿಸಿ ಚನ್ನಬಸವಪ್ಪನವರ ಆಯುಷ್ಯಕ್ರಮ

ದಲ್ಲಿ ವರ್ಣಿಸಿದ ಸಂಗತಿಗಳನ್ನು ತಿಳಿಸಿದವರಿಗೆ ೨೦೦ ರೂಪಾಯಿಗಳ ವರೆಗೆ ಬಹುಮಾನಗಳನ್ನು ಕೊಡುವೆವೆಂಬುದಾಗಿ ಪ್ರಸಿದ್ಧಿಸಿದರು. ಚನ್ನಬಸವಪ್ಪನವರ ಮಕ್ಕಳಾದ ರಾ. ರಾ. ಬಸವಲಿಂಗಪ್ಪ ಚನ್ನಬಸವಪ್ಪ ಧಾರವಾಡ, ರಾ. ರಾ. ಶಿವಾನಂದ ಯಜ್ಞೇಶ್ವರ ವಾಜಪೆ ಸ್ಕೂಲ್ ಮಾಸ್ತರ ರೋಣ, ಕೈ. ವಾ. ಶಿದ್ಧರಾಮಯ್ಯ ಹನ್ನೆರಡು ಮಠ ಪೆನಶೆಂಡ ಮಾಸ್ತರ ಹುಬ್ಬಳ್ಳಿ ಈ ಮೂವರು ಮಾತ್ರ ತಮಗೆ ಗೊತ್ತಿದ್ದ ಸಂಗತಿಗಳನ್ನು ಬರೆದು ತಿಳಿಸಿದರು. ಇದಕ್ಕಾಗಿ ಇವರಿಗೆ ನಾವು ಬಹಳ ಆಭಾರಿ ಆಗಿದ್ದೇವೆ. ಇವರಿಗೆ ಅನುಕ್ರಮವಾಗಿ ೨೫, ೫, ೧೦ ರೂಪಾಯಿಗಳು ಈ ಮೇರೆಗೆ ಬಹುಮಾನಗಳು ಪರೀಕ್ಷಾ ಕಮಿಟಿಯವರು ಗೊತ್ತುಪಡಿಸಿದ ಮೇರೆಗೆ ಜಿಲ್ಲಾ ಸಭೆಯವರಿಂದ ಕೊಡಲ್ಪಟ್ಟವು. ಇವರು ಕಳಿಸಿಕೊಟ್ಟ ಸಂಗತಿಗಳಲ್ಲಿ ಯುಕ್ತವಾದವುಗಳನ್ನು ಆರಿಸಿ ಅವುಗಳ ಮೇಲಿಂದ ಮತ್ತು ಬೇರೆ ಕೆಲ ಸಭ್ಯ ಗೃಹಸ್ಥರ ಕಡೆಯಿಂದ ದೊರಕಿಸಿದ ಮಾಹಿತಿಯಿಂದ ಈ ಚರಿತ್ರೆಯು ಬರೆಯಲ್ಪಟ್ಟಿದೆ.

ಈ ಚರಿತ್ರೆಯಲ್ಲಿ ಏನಾದರೂ ತಪ್ಪು ಸಂಗತಿಗಳಿದ್ದದ್ದು ವಾಚಕರಿಗೆ ಕಂಡು ಬಂದರೆ ಮತ್ತು ಚನ್ನಬಸವಪ್ಪನವರ ಬಗ್ಗೆ ಹೆಚ್ಚಿಗೆ ವೃತ್ತಾಂತವು ಯಾರಿಗಾದರೂ ಗೊತ್ತಿದ್ದರೆ ಅವರು ಅವುಗಳನ್ನು ನಮಗೆ ತಿಳಿಸಿದರೆ ನಾವು ಅವರಿಗೆ ಬಹಳೇ ಆಭಾರಿ ಆಗುವೆವು. ಮತ್ತು ಆ ಸಂಗತಿಗಳು ಈ ಚರಿತ್ರೆಯ ಮುಂದಿನ ಆವೃತ್ತಿಯಲ್ಲಿ ಸೇರಿಸಲ್ಪಡುವವು.

**ವಿಜಾಪುರ.**
ತಾ- ೭—೬—೧೯೧೪

**ಫ. ಗು. ಹಳಕಟ್ಟಿ**
ಬಿ. ಎ. ಎಲ್. ಎಲ್. ಬಿ.

# ಕೈ. ವಾ. ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆಯು.

ದೊಡ್ಡ ಮನುಷ್ಯರ ಚರಿತ್ರೆಗಳು ಯಾವಾಗಲೂ ಬೋಧಪ್ರದವಾದವುಗಳು. ಇಂಥ ಜನರು ಕಾಲಕಾಲಕ್ಕೆ ಹುಟ್ಟುವದರಿಂದಲೇ ಜನಾಂಗವು ಮುಂದರಿಸುವದು. ಇವರು ತಮ್ಮ ಕೃತಿಗಳಿಂದಲೂ ಬೋಧದಿಂದಲೂ ಉದಾತ್ತ ವಿಚಾರಗಳನ್ನು ಸಮಾಜದಲ್ಲಿ ಹುಟ್ಟಿಸಿ, ಅದನ್ನು ತಕ್ಕ ಕಾರ್ಯಗಳನ್ನು ಮಾಡಲಿಕ್ಕೆ ಹಚ್ಚುವರು. ಇವುಗಳ ಸುಪರಿಣಾಮಗಳು ಅವರಿದ್ದ ಕಾಲದಲ್ಲಷ್ಟೇ ಅಲ್ಲ, ಅವರ ಮುಂದಿನ ಕಾಲದಲ್ಲಿಯೂ ಜನರಲ್ಲಿ ಶಾಶ್ವತವಾಗಿ ಉಳಿಯುವವು. ಆದ್ದರಿಂದ ಇಂಥ ಜನರ ಚರಿತ್ರೆಗಳನ್ನು ಲಕ್ಷಗೊಟ್ಟು ಅಭ್ಯಾಸಿಸುವದು ಬಹು ಮಹತ್ವವಾದದ್ದು. ಇದರಿಂದ ಮನಸ್ಸು ಸುಸಂಸ್ಕೃತವಾಗುವದಲ್ಲದೆ, ಪ್ರತಿಯೊಬ್ಬನಲ್ಲಿ ಶ್ರೇಷ್ಠಕಾರ್ಯಗಳನ್ನು ಮಾಡುವ ಸ್ಫೂರ್ತಿಯೂ ಉತ್ಸಾಹವೂ ಉಂಟಾಗುವವು.

ಹೋದ ಶತಮಾನದ ಪ್ರಾರಂಭದಲ್ಲಿ ನಮ್ಮ ಇಲಾಖೆಯು ಅತ್ಯಂತ ಖೇದಜನಕವಾದ ಸ್ಥಿತಿಯಲ್ಲಿತ್ತು. ಆಗ ಈ ಇಲಾಖೆಯ ದೊಡ್ಡ ಭಾಗವು ಪೇಶ್ವೆಯರ ಆಳಿಕೆಗೆ ಒಳಪಟ್ಟಿತ್ತು. ಆಗ ಎಲ್ಲಿ ನೋಡಿದರೂ, ಪುಂಡಾಟಿಕೆಗಳೂ ಅಂತಸ್ಥ ಕಲಹಗಳೂ ಕೊಲೆ ಸುಲಿಗೆಗಳೂ ನಿರಾತಂಕವಾಗಿ ನಡೆಯುತ್ತಿದ್ದವು. ಇಂಥ ಕಷ್ಟತಮವಾದ ಸ್ಥಿತಿಯೊಳಗಿಂದ ನಮ್ಮ ದೇಶವು ಪಾರಾಗಿ, ಸನ್ ೧೮೧೮ ರಲ್ಲಿ ಬ್ರಿಟಿಷ್ ರಾಜರ ಆಳಿಕೆಗೆ ಸೇರಿಕೊಂಡಿತು. ಅಂದಿನಿಂದ ಈ ಸೀಮೆಯಲ್ಲಿ ಶಾಂತತೆಯೂ ಸುವ್ಯವಸ್ಥೆಯೂ ತಲೆದೋರಹತ್ತಿದವು. ಬ್ರಿಟಿಶ್ ರಾಜರು ಅಲ್ಲಲ್ಲಿ ಶಾಲೆಗಳನ್ನು ಏರ್ಪಡಿಸಿ ಪ್ರಜೆಗಳಿಗೆ ವಿದ್ಯಾದಾನ ಮಾಡಹತ್ತಿದರು. ಆ ಕಾಲಕ್ಕೆ ದೇಶದಲ್ಲಿ ಅನೇಕ ಮಹನೀಯರು ಉತ್ಪನ್ನರಾಗಿ ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಮಾಡಹತ್ತಿದರು. ಈ ಬಗೆಯ ಶ್ರೇಷ್ಠಕಾರ್ಯಗಳಲ್ಲಿ ಕರ್ನಾಟಕದಲ್ಲಿ ಮೊದಲು ತೊಡಗಿದವರಲ್ಲಿ ನಮ್ಮ ಚರಿತ್ರ ನಾಯಕರಾದ ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರೇ ಮುಖ್ಯರಾಗಿರುತ್ತಾರೆ. ಇವರು ಪಾಶ್ಚಿಮಾತ್ಯ ಶಿಕ್ಷಣ

ವನ್ನು ಪಡೆದು, ವಿದ್ಯಾಖಾತೆಯನ್ನು ಸೇರಿ, ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಉದ್ಯೋಗವನ್ನು ಕೈಕೊಂಡು, ನಮ್ಮ ಕರ್ನಾಟಕ ಸೀಮೆಯಲ್ಲಿ ವಿದ್ಯಾಪ್ರಸಾರ ಮಾಡುವ ಶ್ರೇಷ್ಠ ಕಾರ್ಯವನ್ನು ಮಾಡಹತ್ತಿದರು. ಇವರೇ ನಮ್ಮ ಕರ್ನಾಟಕ ಭಾವೀ ಸುಧಾರಣೆಯ ಬೀಜಾರೋಪಣೆಗೆ ಕಾರಣವಾಗಿದ್ದಾರೆ. ಇವರು ತೀರಿಕೊಂಡು ಇಂದಿಗೆ ೪೯ ವರ್ಷಗಳಾದವು ಆದರೂ ಇವರು ಮಹಾಗಣಿತಜ್ಞರೂ ಕನ್ನಡ ಭಾಷೆಯ ಉತ್ಕಟಾಭಿಮಾನಿಗಳೂ ಕರ್ನಾಟಕ ದೇಶದ ಹಿತಚಿಂತಕರೂ ಅತ್ಯಂತ ಸಾಹಸಿಗರೂ ತೇಜಃಪುಂಜರೂ ಎಂಬ ಭಾವನೆಯು ಪ್ರತಿಯೊಬ್ಬ ಕನ್ನಡಿಗನ ಮನಸ್ಸಿನಲ್ಲಿ ಇನ್ನೂ ಬಾರದೆ ಇರುವದಿಲ್ಲ. ಇಂಥ ಮಹಾನುಭಾವರ ಗುಣಗಳ ವರ್ಣನೆಯು ಈ ಪುಸ್ತಕದಲ್ಲಿ ಎಷ್ಟು ಸಂಕ್ಷಿಪ್ತ ಮತ್ತು ಅಪೂರ್ಣವಾಗಿದ್ದರೂ ಅದು ವಾಚಕರಿಗೆ ಹೃದಯಂಗಮವಾಗದಿರಲಾರದೆಂದು ನಾನು ಭಾವಿಸುತ್ತೇನೆ.

## ಬಾಲ್ಯ.

ಚನ್ನಬಸವಪ್ಪನವರ ಪೂರ್ವಜರ ಊರು ಬೆಳಗಾವಿ ಜಿಲ್ಲೆಯಲ್ಲಿರುವ ಗೋಕಾವಿಯು. ಇವರ ಅಜ್ಜಂದಿರ ಹೆಸರು ಅಪ್ಪಯ್ಯಪ್ಪನವರು. ಇವರು ಅದೇ ಊರಲ್ಲಿ ವ್ಯಾಪಾರ ಮಾಡುತ್ತಿದ್ದರು. ಮನೆಯಿಂದ ತಕ್ಕಮಟ್ಟಿಗೆ ಸ್ಥಿತಿವಂತರೂ ಇದ್ದರು. ಇವರಿಗೆ ಅಪ್ಪಣ್ಣಪ್ಪ ಮತ್ತು ಬಸಲಿಂಗಪ್ಪ ಎಂಬ ಇಬ್ಬರು ಮಕ್ಕಳು. ಇವರಲ್ಲಿ ಬಸಲಿಂಗಪ್ಪನವರೇ ಚನ್ನಬಸಪ್ಪನವರ ತಂದೆಯವರು. ಮನೆಯಲ್ಲಿ ಕೆಲವು ಕಾರಣಗಳ ಸಲುವಾಗಿ ಕೂಡಿ ಬಾರದ್ದರಿಂದ, ಬಸಲಿಂಗಪ್ಪನವರು ಗೋಕಾವಿಯನ್ನು ಬಿಟ್ಟು, ಧಾರವಾಡಕ್ಕೆ ಬಂದು ವ್ಯಾಪಾರದಿಂದ ತಮ್ಮ ಉಪಜೀವನವನ್ನು ಸಾಗಿಸಹತ್ತಿದರು.

ಬಸಲಿಂಗಪ್ಪನವರ ಹೆಂಡತಿಯವರ ಹೆಸರು ತಿಪ್ಪವ್ವನವರು. ಇವರ ಹೊಟ್ಟೆಯಿಂದ ದೊಡ್ಡ ಚನ್ನಬಸಪ್ಪನವರೂ ಸಣ್ಣ ಚನ್ನಬಸಪ್ಪನವರೂ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಇವರಲ್ಲಿ ದೊಡ್ಡ ಚನಬಸಪ್ಪನವರೇ ನಮ್ಮ ಚರಿತ್ರನಾಯಕರು. ಇವರು ಸನ್ ೧೮೩೩ನೇ ಇಸ್ವಿಯಲ್ಲಿ ಧಾರವಾಡ ಪಟ್ಟಣದಲ್ಲಿ ಹುಟ್ಟಿದರು. ಇವರು ಹುಟ್ಟಿದ ಬಳಿಕ ಇವರ ತಂದೆಯವರು ಬಹಳ ದಿವಸ ಬಾಳಲಿಲ್ಲ. ಚನ್ನಬಸಪ್ಪನವರು ೬ ವರ್ಷದವರಿರುವಾಗಲೇ ಬಸಲಿಂಗಪ್ಪನವರು ತೀರಿಕೊಂಡರು. ಆದ್ದರಿಂದ ಮನೆತನವನ್ನು ಸಾಗಿಸುವ ಮತ್ತು ಮಕ್ಕಳನ್ನು ಜೋಪಾನಮಾಡುವ ಭಾರವೆಲ್ಲ. ತಿಪ್ಪವ್ವನವರ ಮೇಲೆಯೇ ಬಿತ್ತು.



ತಿಪ್ಪವ್ವನವರು ಒಳ್ಳೆ ಎಚ್ಚರಿಕೆಯವರು... 

ತಿಪ್ಪವ್ವನವರು ಒಳ್ಳೆ ಎಪೆಗಾರರಾಗಿದ್ದರು. ಅವರು ತಮ್ಮ ಗಂಡಂದಿರು ದೊರಕಿಸಿಟ್ಟ ಅಲ್ಪ ಸ್ವಲ್ಪ ದ್ರವ್ಯದ ಸಹಾಯದಿಂದ ಸಂಸಾರವನ್ನು ಸುಸೂತ್ರವಾಗಿ ಸಾಗಿಸಿದರು. ತಮ್ಮ ಮಕ್ಕಳು ವಿದ್ಯವನ್ನು ಕಲಿತು ಬುದ್ಧಿವಂತರಾಗಬೇಕೆಂಬ ಇಚ್ಛೆಯು ಅವರಲ್ಲಿ ಸಂಪೂರ್ಣವಾಗಿತ್ತು. ಇದೇ ಕಾರಣದಿಂದ ಚನ್ನಬಸವಪ್ಪನವರು ಚನ್ನಾಗಿ ಅಭ್ಯಾಸ ಮಾಡಿ ದೊಡ್ಡ ಪದವಿಗೆ ಏರಲು ಶಕ್ತರಾದರು. ಮೊದಲು ಅವರ ತಾಯಿಯವರು ಅವರನ್ನು ಧಾರವಾಡವಲ್ಲಿದ್ದದ್ದೊಂದು ಹಳೇ ಪದ್ಧತಿಯ ಅಯ್ಯನವರ ಶಾಲೆಗೆ ಕಳಿಸಿದರು.

## ಪ್ರಾಥಮಿಕ ಶಿಕ್ಷಣ.

ಚನ್ನಬಸವಪ್ಪನವರ ಗುರುಗಳ ಹೆಸರು ಶಿವರುದ್ರಯ್ಯನವರು. ಅವರ ಕೈಕೆಳಗೆ ಚನಬಸವಪ್ಪನವರ ಶಿಕ್ಷಣವು ಪ್ರಾರಂಭವಾಯಿತು. ಆದರೆ ಚನ್ನಬಸವಪ್ಪನವರು ಬಹಳೇ ಕಿಡಿಗೇಡಿ ಸ್ವಭಾವದವರಾಗಿದ್ದರು. ಉಡಾಳತನದಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇರಲಿಲ್ಲ. ಶಾಲೆಗೆ ಹೋಗುವದನ್ನು ತಪ್ಪಿಸಿ ತುಂಟ ಹುಡುಗರನ್ನು ಕೂಡಿಕೊಂಡು ಜಗಳ ತೆಗೆಯುವದೂ ಹುಡುಗರ ಬಹು ದಸ್ತವಾದ ಪಾಟಿಗಳನ್ನು ಹುಡುಕಿ ಅವುಗಳನ್ನು ಗುದ್ದಿ ಒಡೆಯುವದೂ ಸಿಟ್ಟು ಬಂದರೆ ಮನೆಯೊಳಗಿನ ಸಾಮಾನುಗಳನ್ನು ಬೀದಿಯ ಮೇಲೆ ಬೀಸಾಡುವದೂ, ಇವೇ ಮೊದಲಾದ ದುರ್ಗುಣಗಳು ಇವರಲ್ಲಿ ಸಂಪೂರ್ಣವಾಗಿದ್ದವು. ಆದ್ದರಿಂದ ಅವರ ಅಭ್ಯಾಸವು ಪ್ರಾರಂಭದಲ್ಲಿ ಚನ್ನಾಗಿ ನಡೆಯಲಿಲ್ಲ. ಆದರೆ ಅವರಲ್ಲಿದ್ದ ಚುರುಕುಬುದ್ಧಿಯನ್ನೂ, ಜ್ಞಾಪಕಶಕ್ತಿಯನ್ನೂ, ಅವರ ಗುರುಗಳೂ ತಾಯಿಯವರೂ ಕಂಡು ಅವರಿಗೆ ಚನ್ನಾಗಿ ವಿದ್ಯೆ ಕಲಿಸಬೇಕೆಂದು ಅಪೇಕ್ಷಿಸಿದರು. ತಾಯಿಯವರು ಅವರ ತುಂಟತನಕ್ಕಾಗಿ ಅವರನ್ನು ಮೇಲಿಂದ ಮೇಲೆ ದಂಡಿಸುತ್ತಿದ್ದರು. ಶಿವರುದ್ರಯ್ಯನವರಾದರೂ ಅವರನ್ನು ಹಾದಿಗೆ ತರಲು ತಮ್ಮಿಂದಾದಷ್ಟು ಯತ್ನಿಸುತ್ತಿದ್ದರು. ಆದರೆ ಅವೆಲ್ಲವೂ ಮೊದಲಿಗೆ ನಿಷ್ಫಲವಾದವು. ಕಟ್ಟಕಡೆಗೆ ಒಂದು ದಿವಸ ಗುರುಗಳು ಚನ್ನಬಸಪ್ಪನವರಿಗೆ ಚನ್ನಾಗಿ ಸಿಟ್ಟು ಮಾಡಿ ಒಳಿತಾಗಿ ಹೊಡೆದರು. ಅಂದಿನಿಂದ ಮಾತ್ರ ಅವರು ತಮ್ಮ ಕಿಡಿಗೇಡಿತನವನ್ನು ಅಲ್ಪಸ್ವಲ್ಪ ಬಿಟ್ಟುಕೊಟ್ಟರೆಂದು ಹೇಳುತ್ತಾರೆ. ಇದು ಹ್ಯಾಗೇ ಇರಲಿ.

ಚನ್ನಬಸವಪ್ಪನವರು ಮುಂದೆ ಉಡಾಳತನವನ್ನು ಬಿಟ್ಟು ತಮ್ಮ ಅಭ್ಯಾಸಕ್ಕೆ ಮನಸ್ಸು ಹಾಕಹತ್ತಿದರು. ಅಂದಿನಿಂದ ಅವರ ಅಭ್ಯಾಸವು ಸಿರಾತಂಕವಾಗಿ ಸಾಗಹತ್ತಿತು. ಅವರು ತಮ್ಮ ಗುರುಗಳ ಕೈಕೆಳಗೆ ಕನ್ನಡ, ಮರಾಠೀ ಓದುಬರಹವನ್ನೂ ಹಳೇ ಪದ್ಧತಿಗೆ ಸರಿಯಾಗಿ ಗಣಿತ ಮತ್ತು ಬಾಯಿಲೆಖ್ಖವನ್ನೂ ಕಲಿತುಕೊಂಡರು.

ಆ ಕಾಲದಲ್ಲಿ ಇಂಗ್ಲಿಷ್ ಕಲಿತವರು ಬಹಳ ಸ್ವಲ್ಪ ಜನರಿದ್ದರು. ಯಾಕೆಂದರೆ ಇಂಗ್ಲಿಷ್ ಕಲಿಯಲಪೇಕ್ಷಿಸುವವರು ಆಗ ಪುಣೆ ಮತ್ತು ಮುಂಬಯಿ ಪಟ್ಟಣಗಳಿಗೆ ಹೋಗಬೇಕಾಗುತ್ತಿತ್ತು. ಆದರೆ ಕೋರ್ಟು ಕಚೇರಿಗಳಲ್ಲಿ ಇಂಗ್ಲಿಷ್ ಭಾಷೆಯು ನಡೆಯುತ್ತಿದ್ದದರಿಂದ ಇಂಗ್ಲಿಷ್ ಕಲಿತವರಿಗೆ ಯೋಗ್ಯತೆಯ ಸ್ಥಳಗಳು ಆಗ ತೀವ್ರವಾಗಿ ದೊರೆಯುತ್ತಿದ್ದವು. ಆದ್ದರಿಂದ ಚನ್ನಬಸವಪ್ಪನವರಲ್ಲಿ ಇಂಗ್ಲಿಷ್ ಕಲಿಯಬೇಕೆಂಬ ಅಪೇಕ್ಷೆಯು ಹುಟ್ಟಹತ್ತಿತು. ಮತ್ತು ಅವರು ಅಭ್ಯಾಸಮಾಡಿದ ಹಾಗೆ ವಿದ್ಯೆಯ ಅಭಿರುಚಿಯೂ ಅವರಲ್ಲಿ ಹೆಚ್ಚಾಗುತ್ತಲೇ ನಡೆಯಿತು. ಮತ್ತು ಅವರಲ್ಲಿ ಮಹತ್ವಾಕಾಂಕ್ಷೆಯೂ ಬೆಳೆಯಹತ್ತಿತು. ಕಟ್ಟಕಡೆಗೆ ಕೆಳಗೆ ಕಾಣಿಸಿದ ಸಂಗತಿಯು ವರ್ತಿಸಿತು.

ಒಂದುದಿನ ಚನ್ನಬಸಪ್ಪನವರು ಸಂಜೆಯ ಹೊತ್ತಿನಲ್ಲಿ ರೊಟ್ಟೀ ತಿನ್ನುತ್ತ ಹಿತ್ತಿಲಲ್ಲಿ ಕುಳಿತಿದ್ದರು. ತಾಯಿಯವರು ಅವರ ಹತ್ತರವೇ ಕೆಲಸಮಾಡುತ್ತ ಕುಳಿತುಕೊಂಡಿದ್ದರು. ಆಗ ಚನ್ನಬಸಪ್ಪನವರ ಮನಸ್ಸಿನಲ್ಲಿ ಯಾವದೋ ಒಂದು ದೀರ್ಘವಿಚಾರವು ಹುಟ್ಟಿದಂತೆ ಕಂಡುಬಂತು. ಆ ಮೇಲೆ ಅವರು ಒಮ್ಮಿಂದೊಮ್ಮೆಲೇ— “ಅವ್ವಾ ನಾನು ಪುಣೆಗೆ ಕಲಿಯಲಿಕ್ಕೆ ಹೋಗುತ್ತೇನೆ. ನನಗೆ ಖರ್ಚಿಗೆ ರೂಪಾಯಿ ಕೊಡು” ಎಂದು ತಾಯಿಯವರನ್ನು ಕೇಳಿದರು. ಅದಕ್ಕೆ ತಾಯಿಯವರು ಇವನು ಹುಡುಗಾಟಿಕೆ ಮಾಡುತ್ತಿರಬಹುದೆಂದಣಿಸಿ ಏನೂ ಉತ್ತರಕೊಡಲಿಲ್ಲ. ಪುಣೆಯು ಧಾರವಾಡದಿಂದ ಬಹು ದೂರದ ಸ್ಥಳವು; ಅಲ್ಲಿಯ ಭಾಷೆಯು ಬೇರೆ, ಜಾತಿ ಬಾಂಧವರಾರೂ ಇಲ್ಲ; ಆದ್ದರಿಂದ ತನ್ನಂಥ ಚಿಕ್ಕ ವಯಸ್ಸಿನವರನ್ನು ಅಲ್ಲಿಗೆ ಕಳಿಸಲಿಕ್ಕೆ ತಾಯಿಯವರು ಒಪ್ಪಲಾರರೆಂದು ಚನ್ನಬಸವಪ್ಪನವರು ಹಾಗೆಯೇ ಸುಮ್ಮನಾದರು. ಆ ಮೇಲೆ ದಿನದಂತೆ ರಾತ್ರೀ ತಾಯಿಮಕ್ಕಳು ಊಟಮಾಡಿ ಮಲಗಿಕೊಂಡರು. ಚನ್ನಬಸಪ್ಪನವರಿಗೆ ಆ ರಾತ್ರೀ ನಿದ್ರೆ ಬರಲಿಲ್ಲ. ಅವರ ಮನಸ್ಸಿನಲ್ಲಿ ನಾನಾತರದ ಕಲ್ಪನೆಗಳು



ಒಂದರ ತರುವಾಯ ಮತ್ತೊಂದು ಬರಹತ್ತಿದವು. ಕಟ್ಟಕಡೆಗೆ ತಾಯಿಯವರಿಗೆ ಗಾಢನಿದ್ರೆಯು ಹತ್ತಿತೆಂದು ತಿಳಿದ ಕೂಡಲೇ, ಅವರು ಮೆಲ್ಲಗೆ ಹಾಸಿಗೆಯಿಂದೆದ್ದು ತಾಯಿಯವರು ರೂಪಾಯಿಗಳನ್ನು ಇಡುತ್ತಿದ್ದ ಪೆಟ್ಟಿಗೆಯ ಬಳಿಗೆ ಹೋಗಿ, ಅದನ್ನು ತೆಗೆದುನೋಡಿದರು. ಅದರಲ್ಲಿ ೩ ರೂಪಾಯಿ ೧೦ ಆಣೆಗಳು ಮಾತ್ರ ಇದ್ದವು. ಅವುಗಳನ್ನು ತಮ್ಮ ಕಿಸೆಯಲ್ಲಿ ಹಾಕಿಕೊಂಡು ಮೆಲ್ಲನೆ ಮನೆಯಿಂದ ಹೊರಗೆ ಬಿದ್ದರು. ಮತ್ತು ರಾತ್ರೀ ಕಾಲದಲ್ಲಿಯೇ ಪುಣೇ ಪಟ್ಟಣದ ಹಾದಿಯನ್ನು ಹಿಡಿದರು.

ಚನ್ನಬಸವಪ್ಪನವರು ಇನ್ನೂ ಚಿಕ್ಕವರಿರುವಾಗಲೇ ಈ ಬಗೆಯ ಧೈರ್ಯದ ಕೆಲಸವನ್ನು ಕೈಕೊಂಡದ್ದಕ್ಕೆ ವಾಚಕರು ಆಶ್ಚರ್ಯಪಡಬಹುದು. ಆದರೆ ಅವರು ಆಶ್ಚರ್ಯಪಡುವ ಕಾರಣವಿಲ್ಲ. ಯಾಕಂದರೆ ಇಂಥ ಧೈರ್ಯದ ಮತ್ತು ಸಾಹಸದ ಮನೋವೃತ್ತಿಯು ಚನ್ನಬಸವಪ್ಪನವರಲ್ಲಿ ಸ್ವಾಭಾವಿಕವಾಗಿಯೇ ಇತ್ತು. ಆ ವೇಳೆ ಅವರು ಪಾದಚಾರಿಗಳಾಗಿ ಪುಣೇಪಟ್ಟಣದ ಹಾದೀ ಹಿಡಿದರು. ಅವರ ಹತ್ತರವಿದ್ದ ಅಲ್ಪ ಹಣವು ೨—೩ ದಿವಸಗಳಲ್ಲಿಯೇ ತೀರಿಹೋಯಿತು. ಪುಣೇಪಟ್ಟಣವು ಇನ್ನೂ ಬಹು ದೂರವಿದ್ದದರಿಂದಲೂ, ಅವರ ಅಜ್ಜಂದಿರ ಮನೆಯಿರುವ ಗೋಕಾವಿಯು ತಮ್ಮ ಹಾದಿಯ ಬಳಿಯಲ್ಲಿಯೇ ಇದ್ದದರಿಂದಲೂ, ಅಲ್ಲಿಗೆ ಹೋಗಬೇಕೆಂದು ಅವರ ಮನಸ್ಸಿನಲ್ಲಿ ಬಂದಿತು. ಅಲ್ಲಿ ಅವರ ಕಕ್ಕಂದಿರ ಮಕ್ಕಳಾದ ಅಮರಪ್ಪನವರು ಇರುತ್ತಿದ್ದರು. ಆಗ ಚನ್ನಬಸವಪ್ಪನವರು ಅವರ ಕಡೆಗೆ ಹೋಗಿ ತಾವು ಪುಣೆಗೆ ವಿದ್ಯೆ ಕಲಿಯಲಿಕ್ಕೆ ಹೋಗುವೆವೆಂದು ಅವರಿಗೆ ಹೇಳಿದರು. ಆದರೆ ಅಮರಪ್ಪನವರು ಚನ್ನಬಸವಪ್ಪನವರಿಗೆ ಏನೂ ಉತ್ತೇಜನ ಕೊಡಲಿಲ್ಲ. ಅಲ್ಲಿ ನಾಗಪ್ಪ ಗಿರಾಮರ ಎಂಬವರೊಬ್ಬರು ಚನ್ನಬಸವಪ್ಪನವರ ತಂದೆಗಳ ಚಿಕ್ಕಂದಿನ ಗೆಳೆಯರಾಗಿದ್ದರು. ಅವರು ಚನ್ನಬಸವಪ್ಪನವರ ಸಾಹಸ ಮತ್ತು ವಿದ್ಯೆ ಕಲಿಯಬೇಕೆಂಬ ಉತ್ಕಟೇಚ್ಛೆ ಇವುಗಳನ್ನು ನೋಡಿ ಬಹು ಸಂತೋಷಪಟ್ಟು ಅವರಿಗೆ ೫೦ ರೂಪಾಯಿಗಳನ್ನು ಕೊಟ್ಟರು. ಈ ಹಣವನ್ನು ಚನ್ನಬಸವಪ್ಪನವರು ತೆಗೆದುಕೊಂಡು ಪುಣೇಪಟ್ಟಣಕ್ಕೆ ಹೋಗಿ ಮುಟ್ಟಿದರು. ಪುಣೇ ಪಟ್ಟಣದಲ್ಲಿ ಚನ್ನಬಸವಪ್ಪನವರ ಮಿತ್ರರಾಗಲಿ ಗುರುತಿನವರಾಗಲಿ ಯಾರೂ ಇದ್ದಿದ್ದಿಲ್ಲ. ಹೀಗಿದ್ದರೂ ಅವರು ಎದೆಗುಂದಲಿಲ್ಲ. ಪುಣೇ ಪಟ್ಟಣವು ಬಹುಕಾಲದಿಂದ ವಿದ್ಯಾಪ್ರೋತ್ಸಾಹನದಲ್ಲಿ ಹೆಸರಾದ

ಪಟ್ಟಣವು. ಅಲ್ಲಿ ವಿದ್ಯಾಪ್ರಿಯರಾದ ಉದಾರ ಸದ್ಗೃಹಸ್ಥರು ಅನೇಕರಿದ್ದರು. ಅವರು ಬಡ ವಿದ್ಯಾರ್ಥಿಗಳಿಗೆ ತಮ್ಮಿಂದಾದಷ್ಟು ಸಹಾಯ ಮಾಡುತ್ತಿದ್ದರು. ಚನ್ನಬಸವಪ್ಪನವರು ತುಸು ದಿವಸಗಳಲ್ಲಿಯೇ ಗೋವಿಂದರಾವ ಮೆಹೇಂದಳೇಕರ ಎಂಬ ಒಬ್ಬ ಶ್ರೀಮಂತರೂ ಉದಾರರೂ ಆದ ಗೃಹಸ್ಥರ ಪರಿಚಯ ಮಾಡಿಕೊಂಡರು. ಅವರು ಚನ್ನಬಸಪ್ಪನವರ ಸಾಹಸಕ್ಕೆ ಮೆಚ್ಚಿ ಅವರು ಪುಣೆಯಲ್ಲಿರುವವರೆಗೆ ಅನೇಕ ರೀತಿಯಿಂದ ಅವರಿಗೆ ಸಹಾಯ ಮಾಡಿದರು.

## ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ.

ಚನ್ನಬಸಪ್ಪನವರು ಪುಣೆಯಲ್ಲಿಯ ಒಂದು ಇಂಗ್ಲಿಷ್ ಶಾಲೆಗೆ ಹೋಗಹತ್ತಿದರು. ತಮ್ಮ ಊಟದ ಮತ್ತು ಇರುವ ಸ್ಥಳದ ವ್ಯವಸ್ಥೆಯಾದ ಬಳಿಕ ಅವರು ತಮ್ಮ ತಾಯಿಯವರಿಗೆ ತಾವು ಪುಣೆಗೆ ಬಂದ ವೃತ್ತಾಂತವನ್ನು ತಿಳಿಸಿ ಅವರನ್ನು ಅಲ್ಲಿಗೆ ಕರಿಸಿಕೊಂಡರು. ತಿಪ್ಪವ್ವನವರಾದರೂ ಚನ್ನಬಸವಪ್ಪನವರ ಸಾಹಸಕ್ಕೆ ಸಂತೋಷಪಟ್ಟು ಕೂಡಲೇ ಪುಣೆಗೆ ಹೋಗಿ ಅವರ ಹತ್ತರವೇ ಇರಹತ್ತಿದರು. ಅವರು ಚನ್ನಬಸವಪ್ಪನವರ ವಿದ್ಯಾಭ್ಯಾಸವು ಮುಗಿಯುವ ವರೆಗೆ ಪುಣೆಯಲ್ಲಿಯೇ ಇದ್ದರು.

ಸುತ್ತಲಿನ ಕಠಿಣ ಪರಿಸ್ಥಿತಿಯು ಮನುಷ್ಯನ ದುರ್ಗುಣಗಳನ್ನು ಬಿಡಿಸಿ ಸುಮಾರ್ಗಕ್ಕೆ ಹಚ್ಚುತ್ತದೆಂಬ ಮಾತು ಸುಳ್ಳಲ್ಲ ಯಾಕಂದರೆ ಚನ್ನಬಸವಪ್ಪನವರು ತಮ್ಮ ಮುಂಚಿನ ತುಂಟುತನವನ್ನು ಬಿಟ್ಟು ಪುಣೆಯಲ್ಲಿ ತಪ್ಪದೆ ಶಾಲೆಗೆ ಹೋಗಹತ್ತಿದರು. ಮತ್ತು ಮನವುಟ್ಟಿ ಅಭ್ಯಾಸ ಮಾಡಲಾರಂಭಿಸಿದರು. ಆ ಮೇಲೆ ಅವರು ಇಂಗ್ಲಿಷ್ ಶಾಲೆಯೊಳಗಿನ ಅಭ್ಯಾಸವನ್ನು ಮುಗಿಸಿಕೊಂಡು ಇಂಜನೀಯರಿಂಗ್ ಕಾಲೇಜಕ್ಕೆ ಸೇರ್ಪಡೆಯಾದರು. ಅವರು ಗಣಿತದಲ್ಲಿ ಬಹು ಮೇಲುಬುದ್ಧಿಯುಳ್ಳವರೂ ಆಧುನಿಕ ಶಾಸ್ತ್ರೀಯ ವಿಷಯಗಳಲ್ಲಿ ಬಹಳೇ ಆಸಕ್ತಿಯುಳ್ಳವರೂ ಇದ್ದದರಿಂದ ಈ ಕಾಲೇಜಿನಲ್ಲಿ ೧೦ ರೂಪಾಯಿಗಳ ಸ್ಕಾಲರಶಿಪ್ಪನ್ನು ಜೇಗನೇ ಸಂಪಾದಿಸಿದರು. ಇದರ ಸಹಾಯದಿಂದಲೂ ತಿಪ್ಪವ್ವನವರ ಹತ್ತರವಿದ್ದ ಅಲ್ಪ ಸ್ವಲ್ಪ ಹಣದಿಂದಲೂ ತಮ್ಮ ಖರ್ಚುವೆಚ್ಚಗಳನ್ನು ಸಾಗಿಸಿಕೊಂಡು ಚನ್ನಾಗಿ ವಿದ್ಯಾಭ್ಯಾಸ ಮಾಡಹತ್ತಿದರು. ಇವರ ತೀಕ್ಷ್ಣ ಬುದ್ಧಿಯನ್ನೂ ಗಣಿತಜ್ಞತೆಯನ್ನೂ ನೋಡಿ ಯಾವತ್ತು ಪ್ರೊಫೆಸರರು



ಅವರಲ್ಲಿ ಮುಖ್ಯವಾಗಿ ಮಹಾರಾಷ್ಟ್ರದಲ್ಲಿ ಆಗ ಪ್ರಸಿದ್ಧ ಗಣಿತಜ್ಞರೆಂದು ಅತ್ಯಂತ ಹೆಸರುವಾಸಿಗಳಾದ ಕೇರೋಪಂತ ನಾನಾ ಛತ್ರೆ ಎಂಬವರು ಚನ್ನಬಸವಪ್ಪನವರನ್ನು ಬಹು ಪ್ರೀತಿಸಲಾರಂಭಿಸಿದರು. ಕಾಲೇಜದಲ್ಲಿ ಚನ್ನಬಸವಪ್ಪನವರಿಗೆ ದಾಜೀ ನೀಲಕಂಠ ಎಂಬ ಇನ್ನೊಬ್ಬ ಸ್ನೇಹಿತರಿದ್ದರು. ಇವರಾದರೂ ಗಣಿತದಲ್ಲಿ ಬಹು ವಿಚಕ್ಷಣರಾಗಿದ್ದರು. ಇವರೆಲ್ಲರೂ ಕೂಡಿಕೊಂಡು ಗಣಿತದ ಪ್ರಶ್ನಗಳನ್ನು ಬಿಡಿಸುವದರಲ್ಲಿ ಆನಂದದಿಂದ ಕಾಲಕಳೆಯುತ್ತಿದ್ದರು. ಚನ್ನಬಸವಪ್ಪನವರು ತಮ್ಮ ಉಳಿದ ವೇಳೆಯನ್ನು ವ್ಯರ್ಥವಾಗಿ ಕಳೆಯದೆ ಗ್ರಂಥಾವಲೋಕನದಲ್ಲಿಯೇ ಹಾಕುತ್ತಿದ್ದರು. ಆದರೆ ಅವರು ಬಹಳ ವಿಚಾರಶಾಲಿಗಳಾಗಿದ್ದದರಿಂದ ಕಟ್ಟುಕಥೆಗಳನ್ನೂ ನಾಟಕಗಳನ್ನೂ ಓದದೆ ಶಾಸ್ತ್ರೀಯ ಗ್ರಂಥಗಳನ್ನು ಅಂದರೆ ತತ್ವಜ್ಞಾನ ಮಾನಸ ಮತ್ತು ನೈತಿಕಶಾಸ್ತ್ರ ಇಂಥ ಮೇಲ್ತರದ ಗ್ರಂಥಗಳನ್ನೇ ಓದುತ್ತಿದ್ದರು. ಕಾಲೇಜದಲ್ಲಿದ್ದಾಗ ಗಣಿತ ಮತ್ತು ತತ್ವಜ್ಞಾನ ಇವೆರಡು ವಿಷಯಗಳ ಮೇಲೆ ಅವರಲ್ಲಿ ಹುಟ್ಟಿದ ಪ್ರೀತಿಯು ಸ್ಥಿರವಾಗಿ ಉಳಿದು ಅವುಗಳ ವ್ಯಾಸಂಗವನ್ನು ಅವರು ಆ ಮರಣಾಂತ ಮಾಡುತ್ತಿದ್ದರು.

ಜಗತ್ತಿನಲ್ಲಿ ಮನುಷ್ಯನು ಬರೇ ತನ್ನ ಬುದ್ಧಿವಂತಿಕೆಯಿಂದ ಮುಂದಕ್ಕೆ ಬರಲಾರನು. ಅವನ ಬುದ್ಧಿವಂತಿಕೆಯೊಂದಿಗೆ ನೈತಿಕಧೈರ್ಯ, ನಿಷ್ಕಪಟತನ, ಸಾಹಸ ಮೊದಲಾದ ಸದ್ಗುಣಗಳು ಅವಶ್ಯವಾಗಿ ಇರಬೇಕಾಗುತ್ತವೆ. ಒಂದು ವೇಳೆ ಆತನಲ್ಲಿ ಕುಶಾಗ್ರಬುದ್ಧಿಯು ಕಡಿಮೆ ಇದ್ದರೂ ಮೇಲ್ಕಂಡ ಸದ್ಗುಣಗಳು ಸಂಪೂರ್ಣವಾಗಿದ್ದರೆ, ಅವನು ಸಮಾಜಕ್ಕೆ ಹೆಚ್ಚು ಉಪಯೋಗವುಳ್ಳವನಾಗುವನು. ಆದರೆ ಸದ್ಗುಣಗಳು ಚಿಕ್ಕಂದಿನಲ್ಲಿ ದೊರೆತ ಶಿಕ್ಷಣ, ವಿದ್ಯಾಭ್ಯಾಸಪದ್ಧತಿ, ಸಂಗತಿ ಇವೇ ಮೊದಲಾದ ಪರಿಸ್ಥಿತಿಯ ಮೇಲೆ ಬಹಳ ಅವಲಂಬಿಸಿರುತ್ತವೆ. ಆದ್ದರಿಂದ ಶಿಕ್ಷಣವು ಪ್ರಾರಂಭವಾದಂದಿನಿಂದ ಅದು ಮುಗಿಯುವ ವರೆಗೆ ವಿದ್ಯಾರ್ಥಿಗೆ ಯೋಗ್ಯ ಸಂಸ್ಕಾರಗಳು ಉಂಟಾಗಲಿಕ್ಕೆ ಎಲ್ಲ ಅನುಕೂಲತೆಗಳಿರುವದು ಬಹು ಮಹತ್ವವಾದದ್ದು. ಆದರೆ ಚನ್ನಬಸವಪ್ಪನವರ ಸುದೈವದಿಂದ ಅವರಿಗೆ ಈ ಎಲ್ಲ ಅನುಕೂಲತೆಗಳು ಪುಣೆ ಪಟ್ಟಣದಲ್ಲಿ ಉಂಟಾಗಿದ್ದವು. ಅವರ ಬುದ್ಧಿವಂತಿಕೆಯು ಅಪ್ರತಿಮವಾಗಿತ್ತು. ಅದರಂತೆ ಅವರಿಗೆ ತಕ್ಕ ಗುರುಗಳೂ ದೊರೆದಿದ್ದರು. ಪ್ರಗತಿಪರವಾದ ಪುಣೆಯ ಸಾನಿಧ್ಯವೂ ಒದಗಿತ್ತು. ಪುಣೆಯು ಮುಖ್ಯ ವಿದ್ಯಾಪೀಠವಾಗಿದ್ದು ಅಲ್ಲಿ ಸಾಮಾಜಿಕ

ವಿದ್ಯಾವಿಷಯಕ ಮತ್ತು ಔದ್ಯೋಗಿಕ ಪ್ರಯತ್ನಗಳ ವಿಷಯವಾಗಿ ಆಗಿಂದಾಗ್ಗೆ ಸಭೆಗಳಾಗುತ್ತಿದ್ದವು. ಅವುಗಳಿಗೆ ಚನ್ನಬಸವಪ್ಪನವರು ತಪ್ಪದೆ ಹೋಗುತ್ತಿದ್ದರು. ಆದರೆ ಅವರು ಈ ಸಭೆಗಳಿಗೆ ಬರೇ ಪ್ರೇಕ್ಷಕರಾಗಿ ಹೋಗದೆ ಸ್ವಾಭಾವಿಕವಾಗಿ ಧೈರ್ಯಸ್ಥರೂ ವಾಕ್ಪಟುಗಳೂ ಇದ್ದದರಿಂದ ಈ ಸಭೆಗಳಲ್ಲಿ ಮಾತಾಡಲಿಕ್ಕೆ ಅವರು ಎಂದೂ ಹಿಂಜರಿಯುತ್ತಿದ್ದಿಲ್ಲ. ಈ ರೀತಿಯಿಂದ ಸಾರ್ವಜನಿಕ ಕಾರ್ಯಗಳನ್ನು ಮಾಡುವ ಪ್ರೀತಿಯು ಚಿಕ್ಕವಯಸ್ಸಿನವರಿರುವಾಗಲೇ ಅವರಲ್ಲಿ ಹುಟ್ಟಹತ್ತಿತು.

ಈ ಮೇರೆಗೆ ಚನ್ನಬಸವಪ್ಪನವರು ಉತ್ತಮ ರೀತಿಯಿಂದ ತಮ್ಮ ಅಭ್ಯಾಸವನ್ನು ಮುಗಿಸಿ, ಕಾಲೇಜದ ಕಡೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆ ಮೇರೆಗೆ ಅವರು ಕೆಲವು ದಿವಸ ಅದೇ ಎಂಜನೀಯರಿಂಗ ಕಾಲೇಜದಲ್ಲಿ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ಈ ಅವಧಿಯು ತೀರಿದ ಬಳಿಕ, ಅವರು ಧಾರವಾಡಕ್ಕೆ ಬಂದರು. ಇದೇ ಕಾಲಕ್ಕೆ ಇಂಗ್ಲಂಡಿನಲ್ಲಿ ಕೂಪರ್ಸಹಿಲ್ಲ ಎಂಜನೀಯರಿಂಗ ಕಾಲೇಜವು ಸ್ಥಾಪಿಸಲ್ಪಟ್ಟಿತ್ತು. ಆ ಕಾಲೇಜಕ್ಕೆ ಹಿಂದೀ ವಿಧ್ಯಾರ್ಥಿಗಳನ್ನು ಕಳಿಸುವ ವಿಷಯದಲ್ಲಿಯೂ ಮೇಲ್ತರದ ಉದ್ಯೋಗಗಳನ್ನು ಹಿಂದೀ ಜನರಿಗೆ ಕೊಡುವ ವಿಷಯದಲ್ಲಿಯೂ ದಾದಾಭಾಯಿ ನವರೋಜಿಯವರು ಪ್ರಯತ್ನ ನಡಿಸಿದ್ದರು ಅವರು ಕೂಪರ್ಸಹಿಲ್ಲ ಕಾಲೇಜಕ್ಕೆ ಕಳಿಸಿಕೊಡಲು ಯೋಗ್ಯರಾದ ೫ ಜನ ಹಿಂದುಸ್ಥಾನದ ವಿದ್ಯಾರ್ಥಿಗಳನ್ನು ಆರಿಸಿ, ಅವರ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ ಧೊರೆಗಳವರ ಕೂಡ ಪತ್ರವ್ಯವಹಾರ ನಡಿಸಿದ್ದರು. ಈ ಪ್ರಕಾರ ಅವರು ಆರಿಸಿದವರಲ್ಲಿ ಚನ್ನಬಸವಪ್ಪನವರು ಒಬ್ಬರಾಗಿದ್ದರು. ಆದರೆ ದಾದಾಭಾಯಿಯವರ ಪ್ರಯತ್ನಗಳು ಸಫಲವಾಗದ್ದರಿಂದ, ಚನ್ನಬಸವಪ್ಪನವರು ಇಂಗ್ಲಂಡಕ್ಕೆ ಹೋಗುವದು ನಿಂತುಹೋಯಿತು.

## ಸರಕಾರೀ ಉದ್ಯೋಗ.

ಚನ್ನಬಸಪ್ಪನವರು ಈ ಮೇರೆಗೆ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ೧೮೫೫ ನೇ ಇಸವಿಯಲ್ಲಿ ಧಾರವಾಡಕ್ಕೆ ಬಂದಬಳಿಕ ಮೊದಲು ಅವರು ಪೋಷ್ಟಖಾತೆಯಲ್ಲಿ ನೌಕರೀ ಹಿಡಿದರು. ಆದರೆ ಅವರು ಆ ಖಾತೆ

---

* ಪಾವರ್ಟಿ ಅ್ಯಂಡ ಅನ್ ಬ್ರಿಟಿಶ್ ರೂಲ ಇನ್ ಇಂಡಿಯಾ ದಾದಾಭಾಯಿನವರೋಜಿ. ಪುಟ ೧೦೫



ಯಲ್ಲಿ ಬಹಳ ದಿವಸವಿರದೆ ಮುಂದೆ ವಿದ್ಯಾಖಾತೆಯನ್ನು ಸೇರಿದರು. ಇವರು ಸನ್ ೧೮೫೬ ನೇ ಇಸ್ವಿಯ ಜಾನ್ಯುವರಿ ತಿಂಗಳಿನಲ್ಲಿ ಬೆಳಗಾವಿಯಲ್ಲಿದ್ದ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟರು. "ನಾರ್ಮಲ್ ಸ್ಕೂಲ್' ಅಂದರೆ ಶಿಕ್ಷಣ ಪದ್ಧತಿಯನ್ನು ಕಲಿಸಿ ಶಿಕ್ಷಕರನ್ನು ಸಿದ್ಧಪಡಿಸುವ ಒಂದು ಶಾಲೆಯು. ಈ ನಾರ್ಮಲ್ ಸ್ಕೂಲು ಮುಂದೆ ಬೆಳೆಯುತ್ತ ಹೋಗಿ ಧಾರವಾಡ ಟ್ರೇನಿಂಗ ಕಾಲೇಜವಾಯಿತು. ಇಲ್ಲಿ ಕೆಲವು ವರ್ಷ ಕೆಲಸಮಾಡಿದ ಬಳಿಕ ಚನ್ನಬಸಪ್ಪನವರು ೧೮೬೧ನೇ ಇಸವಿಯಲ್ಲಿ ೧೫೦ ರೂಪಾಯಿಗಳ ಮೇಲೆ ಬೆಳಗಾವೀ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟರು. ಅಲ್ಲಿ ಸುಮಾರು ೯ ವರ್ಷ ಕೆಲಸಮಾಡಿದ ಬಳಿಕ ೧೮೭೦ ನೇ ಇಸವಿಯಲ್ಲಿ ಅವರು ೨೦೦ ರೂಪಾಯಿಗಳ ಮೇಲೆ ಧಾರವಾಡ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟರು. ಅದೇ ಉದ್ಯೋಗವನ್ನು ಅವರು ತಮ್ಮ ಮರಣದ ವರೆಗೆ ಅಂದರೆ ೧೮೮೧ ನೇ ಇಸವಿಯ ಜಾನ್ಯೂವರಿ ೪ ನೇ ತಾರೀಖಿನ ವರೆಗೆ ಮಾಡಿದರು. ನಡುವೆ ಒಂದೆರಡು ಸಾರೆ ಮಾತ್ರ ಅವರು ಆ್ಯಕ್ಟಿಂಗ ಎಜ್ಯುಕೇಶನಲ್ಲ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದರು. ಈ ಪ್ರಕಾರ ಚನ್ನಬಸವಪ್ಪನವರು ಬಹುತರವಾಗಿ ತಮ್ಮ ಆಯುಷ್ಯವನ್ನೆಲ್ಲ ವಿದ್ಯಾಖಾತೆಯಲ್ಲಿಯೇ ಕಳೆದರು. ಈ ಅವಧಿಯಲ್ಲಿ ಅವರು ಸರಕಾರದ ಸೇವೆಯನ್ನು ಮನಃಪೂರ್ವಕವಾಗಿ ಮಾಡಿದ್ದಲ್ಲದೆ, ತಮ್ಮ ದೇಶದ ಬಗ್ಗೆ ಮತ್ತು ಜನರ ಬಗ್ಗೆ ತಾವು ಮಾಡತಕ್ಕ ಕರ್ತವ್ಯಗಳನ್ನು ಮಾಡಿ, ಹೆಸರುವಾಸಿಗಳಾದರು.

ಚನಬಸವಪ್ಪನವರು ತಮ್ಮ ಶಾಳಾ ಸುಧಾರಣೆಯ ಕಾರ್ಯದಲ್ಲಿ ಬಹು ದಕ್ಷರಾಗಿದ್ದರು. ಅವರು ತಮ್ಮ ವೇಳೆಯನ್ನು ಸೋಮಾರಿತನದಲ್ಲಿ ಎಂದೂ ಕಳೆಯಲಿಲ್ಲ. ಮೇಲಿಂದಮೇಲೆ ಶಾಲೆಗಳಿಗೆ ಹೋಗಿ, ಮಾಸ್ತರರು ತಮ್ಮ ಕಾರ್ಯದಲ್ಲಿ ತತ್ಪರರಾಗಿರುವರೋ ಇಲ್ಲವೋ ಎಂಬದನ್ನು ಪರೀಕ್ಷಿಸುತ್ತಿದ್ದರು. ಆದರೆ ಅವರು ತಮ್ಮ ಅಧಿಕಾರದಲ್ಲಿ ಯಾರಿಗೂ ಅಹಿತ ಮಾಡಲಿಲ್ಲ. ಅವರು ಸಿಟ್ಟಿನ ಸ್ವಭಾವದವರೂ ಬಿರಿಸು ಮಾತಿನವರೂ ಆಗಿದ್ದರು. ಆದರೂ ಅವರು ಸ್ವಭಾವತಃ ದಯಾರ್ದ್ರಹೃದಯ ಉಳ್ಳವರಾಗಿದ್ದದರಿಂದ, ಮಾಡಿದ ತಪ್ಪುಗಳನ್ನು ಕೂಡಲೇ ಕ್ಷಮಿಸುತ್ತಿದ್ದರು. ಮಾಸ್ತರರಲ್ಲಿ ಯಾರಾದರೂ ಚನ್ನಾಗಿ ಕೆಲಸ ಮಾಡುವವರಿದ್ದರೆ ಅವರು ಅವರನ್ನು ಬಹಳ ಪ್ರೋತ್ಸಾಹಿಸುತ್ತಿದ್ದರು. ಅವರಲ್ಲಿ

ಒಂದು ವೇಳೆ ಗಣಿತ ಬಲ್ಲವರಿದ್ದರಂತೂ ಅವರು ಅವರನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಈ ಮೇರೆಗೆ ಚನ್ನಬಸವಪ್ಪನವರ ವರ್ತನವಿದ್ದದರಿಂದ, ಅವರ ಕೈಕೆಳಗಿನ ಮಾಸ್ತರರು ಅವರ ಬಗ್ಗೆ ಬಹು ಪೂಜ್ಯ ಬುದ್ಧಿಯುಳ್ಳವರಾಗಿದ್ದರು. ಚನ್ನಬಸವಪ್ಪನವರಲ್ಲಿದ್ದ ಶ್ರೇಷ್ಠ ಗುಣಗಳನ್ನೂ ಕರ್ತವ್ಯ ದಕ್ಷತೆಯನ್ನೂ ಅವರ ವರಿಷ್ಠರಾದ ರಸಲ್ ದೊರೆಗಳು ಸಂಪೂರ್ಣವಾಗಿ ಅರಿತು ಕೊಂಡಿದ್ದರು. ಆದ್ದರಿಂದ ಅವರ ವಿಶ್ವಾಸವು ಅವರ ಮೇಲೆ ತುಂಬಾ ಇತ್ತು. ಈ ಮೇರೆಗೆ ಚನ್ನಬಸವಪ್ಪನವರು ತಮ್ಮ ಕೆಲಸದಲ್ಲಿ ಮೇಲಿನವರಿಗೂ ಕೆಳಗಿನವರಿಗೂ ಬಹು ಪ್ರಿಯರಾಗಿದ್ದರು.

## ಶಿಕ್ಷಣ ಪ್ರಸಾರದ ಬಗ್ಗೆ ಪ್ರಯತ್ನಗಳು.

ಮೇಲ್ಕಂಡ ಗುಣಗಳುಳ್ಳ ಅಧಿಕಾರಿಗಳು ಪ್ರತಿಯೊಂದು ಸರಕಾರೀ ಖಾತೆಯಲ್ಲಿ ಅನೇಕರು ಯಾವಾಗಲೂ ಸಿಗುವದುಂಟು. ಆದರೆ ಚನ್ನಬಸವಪ್ಪನವರ ಹೆಸರು ನಮ್ಮ ಕರ್ನಾಟಕಸ್ತರ ಮನಸ್ಸಿನಲ್ಲಿ ಹ್ಯಾಗೆ ಶಾಶ್ವತವಾಗಿ ಉಳಿದಿರುತ್ತದೋ ಹಾಗೆ ಅವರ ಹೆಸರುಗಳು ಮಾತ್ರ ನಮ್ಮ ನಾಡಿನಲ್ಲಿ ಉಳಿದಿರುವದಿಲ್ಲ. ಇದಕ್ಕೆ ಕೆಲವು ಕಾರಣಗಳುಂಟು. ಚನ್ನಬಸವಪ್ಪನವರು ಒಂದುವೇಳೆ ತಮ್ಮ ಸರಕಾರೀ ಕೆಲಸವನ್ನು ಬರೇ ಪಗಾರದ ಆಶೆಯಿಂದ ಮಾಡುವವರಾಗಿದ್ದರೆ, ಅವರ ನೆನಪು ಸಹ ನಮ್ಮಲ್ಲಿ ಉಳಿಯುತ್ತಿದ್ದಿಲ್ಲ. ಆದರೆ ಅವರು ತಮ್ಮ ಕಾರ್ಯದಲ್ಲಿ ಒಂದು ಶ್ರೇಷ್ಠ ಗುರಿಯನ್ನು ಹಿಡಿದವರಾಗಿದ್ದರು. ಅವರ ಮನಸ್ಸಿನಲ್ಲಿ ಅಜ್ಞಜನ ಸಮುದಾಯದಲ್ಲಿ ವಿದ್ಯಾಪ್ರಸಾರ ಮಾಡಿ ಕರ್ನಾಟಕ ಪ್ರಾಂತವನ್ನು ಮುಂದಕ್ಕೆ ಒಯ್ಯುವ ಶ್ರೇಷ್ಠ ಆಕಾಂಕ್ಷೆಯು ಪೂರ್ಣವಾಗಿ ತುಂಬಿಕೊಂಡಿತ್ತು. ಮತ್ತು ಅದಕ್ಕನುಗುಣವಾಗಿಯೇ ಅವರು ತಮ್ಮ ಕಾರ್ಯದಲ್ಲಿ ಪ್ರವರ್ತಿಸುತ್ತಿದ್ದರು. ಆದುದರಿಂದಲೇ ಅವರು ಇಷ್ಟು ಲೋಕಪ್ರಿಯರೂ ಇಷ್ಟು ಜನಹಿತ ಕರ್ತೃಗಳೂ ಆಗಲು ಶಕ್ತರಾದರು.

ಚನ್ನಬಸವಪ್ಪನವರು ಡಿಪೂಟಿ ಎಜ್ಯುಕೇಶನಲ್ಲ ಇನಸ್ಪೆಕ್ಟರರಾಗುವ ಪೂರ್ವದಲ್ಲಿ, ನಮ್ಮ ಭಾಗದಲ್ಲಿ ಬಹು ಸ್ವಲ್ಪ ಶಾಲೆಗಳಿದ್ದವು. ಆಕಾಲಕ್ಕೆ ಜನರಲ್ಲಿ ವಿದ್ಯಾಕಾಂಕ್ಷೆಯು ಅತ್ಯಲ್ಪವಾಗಿದ್ದಿತು. ಆದ್ದರಿಂದ ಚನ್ನಬಸವಪ್ಪನವರು ಡಿಪೂಟಿ ಎಜ್ಯುಕೇಶನಲ್ಲ ಇನಸ್ಪೆಕ್ಟರರಾದ ಮೇಲೆ, ಅವರು ಊರೂರಿಗೆ ಹೋಗಿ, ಶಾಲೆಗಳನ್ನು ಸ್ಥಾಪಿಸಲು ಜನರಿಗೆ ಬಹಳ ಉತ್ತೇ



ಜನ ಕೊಡಹತ್ತಿದರು. ಅವರು ಸ್ವಾಭಾವಿಕವಾಗಿ ವಾಕ್ಪ್ರವೀಣರಿದ್ದರು. ಅವರಲ್ಲಿ ಲೋಹಚುಂಬಕದಂತೆ ಜನರ ಮನಸ್ಸನ್ನು ಎಳೆಯುವ ಮೇಲಾದ ಗುಣವಿತ್ತು. ಅವರು ಹಳ್ಳಿಗಳಿಗೆ ಹೋದಾಗ್ಗೆ ಒಬ್ಬ ಉಪದೇಶಕನಂತೆ ತಮ್ಮ ಅಜ್ಞಬಂಧುಗಳನ್ನು ತಮ್ಮ ಸುತ್ತಲು ನೆರೆಯಿಸಿಕೊಂಡು, ವಿದ್ಯೆಯ ಮಹತ್ವವನ್ನೂ ನೀತಿಯಮಾತುಗಳನ್ನೂ ಅವರಿಗೆ ಹೇಳುತ್ತಿದ್ದರು. ಈ ತರದ ಪ್ರಯತ್ನಗಳನ್ನು ಅವರು ಎಡೆಬಿಡದೆ ಸಾಗಿಸಿದ್ದದರಿಂದ, ಹಳ್ಳಿ ಹಳ್ಳಿಗಳಲ್ಲಿ ಶಾಲೆಗಳು ಬಹು ಭರದಿಂದ ಸ್ಥಾಪಿಸಲ್ಪಡಹತ್ತಿದವು. ಇದಲ್ಲದೆ ಅವರ ಮೇಲೆ ಎಜ್ಯುಕೇಶನಲ್ಲ ಇನಸ್ಪೆಕ್ಟರರಾಗಿದ್ದ ಮೆ. ರಸಲ್ ದೊರೆಗಳಂಥ ಕಾರ್ಯದಕ್ಷರೂ, ಕರ್ನಾಟಕಹಿತಾಪೇಕ್ಷಿಗಳೂ ಆದ ಯುರೋಪಿಯನ್ನ ಅಧಿಕಾರಿಗಳಿದ್ದರು. ಇವರ ಮನಸ್ಸಿನಲ್ಲಾದರೂ ಕನ್ನಡ ನಾಡಿನಲ್ಲಿ ವಿದ್ಯಾಪ್ರಸಾರ ಮಾಡುವ ಆಕಾಂಕ್ಷೆಯು ಸಂಪೂರ್ಣವಾಗಿತ್ತು. ಮತ್ತು ಅವರಿಗೆ ನಮ್ಮ ಕರ್ನಾಟಕದ ಸುದೈವದಿಂದ, ಚನ್ನಬಸವಪ್ಪನವರಂಥ ಕರ್ನಾಟಕದ ಅಭಿಮಾನಿಗಳೂ ಕಾರ್ಯದಕ್ಷರೂ ಆದ ಅಧಿಕಾರಿಗಳು ಸಿಕ್ಕದ್ದರಿಂದ ಇವರಿಬ್ಬರ ವಿಶೇಷ ಸಹಾಯದಿಂದ ನಮ್ಮ ಕರ್ನಾಟಕದಲ್ಲಿ ಬಹು ತೀವ್ರವಾಗಿ ವಿದ್ಯಾಪ್ರಸಾರವಾಗಹತ್ತಿತು. ಇದು ಕೆಳಗೆ ಕಾಣಿಸಿದ ಅಂಕಿಗಳಿಂದ ವಾಚಕರಿಗೆ ಸ್ಪಷ್ಟವಾಗಿ ತಿಳಿದು ಬರುವಂತೆ ಇದೆ.

| ಸಂ | ಜಿಲ್ಹೆ. | ವರ್ಷ. | ಶಾಲೆಗಳು | ವಿದ್ಯಾರ್ಥಿಗಳು. |
|---|---|---|---|---|
| ೧ | ಧಾರವಾಡ | ೧೮೫೫—೫೬ | ೧೨ | ೧೩೪೧ |
| | | ೧೮೬೫—೬೬ | ೪೮ | ೪೧೬೪ |
| | | ೧೮೮೨—೮೩ | ೩೪೧ | ೨೯,೭೧೧ |
| ೨ | ಬೆಳಗಾವ | ೧೮೫೫—೫೬ | ೧೩ | ೧೪೯೮ |
| | | ೧೮೬೫—೬೬ | ೫೫ | ೪೩೭೪ |
| | | ೧೮೮೨—೮೩ | ೧೭೭ | ೧೫,೮೧೯ |
| ೩ | ವಿಜಾಪುರ | ೧೮೫೫—೫೬ | ೯ | ೩೯೫ |
| | | ೧೮೬೫—೬೬ | ೪೬ | ೨೮೭೭ |
| | | ೧೮೮೨—೮೩ | ೧೫೦ | ೯೯೬೪ |

ಈ ಅಂಕಿಗಳಿಂದ ೧೮೬೫—೬೬ರಲ್ಲಿ ಮೂರೂ ಕನ್ನಡ ಜಿಲ್ಹೆಗಳಲ್ಲಿ ಬಹುತರವಾಗಿ ಅಷ್ಟೇ ಶಾಲೆಗಳಿದ್ದವು. ಅಂದರೆ ಅವು ೪೫-೫೦ ಮಾತ್ರ

ವಿದ್ದವು ಆದರೆ ಮುಂದೆ ಅವು ಭರದಿಂದ ಹೆಚ್ಚಾಗುತ್ತಹೋದದ್ದು ಕಂಡು ಬರುತ್ತದೆ. ಆದರೆ ಚನ್ನಬಸವಪ್ಪನವರು ಹೆಚ್ಚಾಗಿ ಕಾರ್ಯಮಾಡಿದ ಧಾರವಾಡ ಜಿಲ್ಹೆಯಲ್ಲಿ ಶಾಲೆಗಳು ಬಹು ತೀವ್ರವಾಗಿ ಬೆಳೆದವೆಂಬುದು ವಾಚಕರ ದೃಷ್ಟಿಗೆ ಬೀಳುವಂತೆ ಇದೆ. ಅವರ ಪ್ರಯತ್ನಗಳಿಂದ ಧಾರವಾಡ ಜಿಲ್ಹೆಯಲ್ಲಿ ಪ್ರಾಥಮಿಕ ಶಿಕ್ಷಣವು ಬಹು ಒತ್ತರದಿಂದ ಸಾಗಿತು. ಈ ಕಾರಣದಿಂದಲೇ ಆ ಜಿಲ್ಹೆಯು ಈಗಲೂ ಕರ್ನಾಟಕದಲ್ಲಿ ವಿದ್ಯೆಯಲ್ಲಿ ಮುಂದಾದ ಜಿಲ್ಹೆಯಾಗಿದೆ.

## ಕನ್ನಡ ಭಾಷೆಗೆ ಉತ್ತೇಜನ.

ಚನ್ನಬಸಪ್ಪನವರು ಕನ್ನಡ ಭಾಷೆಗೆ ಉತ್ತೇಜನಕೊಟ್ಟು ಆ ಭಾಷೆಯ ಶಾಲೆಗಳನ್ನು ಹೆಚ್ಚಿಸಲಿಕ್ಕೆ ಬಹು ಶ್ರಮಪಟ್ಟರು. ಇದು ಅವರು ಮಾಡಿದ ಮತ್ತೊಂದು ಮಹತ್ಕಾರ್ಯವಾಗಿರುತ್ತದೆ. ಅವರು ವಿದ್ಯಾಖಾತೆಗೆ ಸೇರುವ ಮೊದಲು ಬಹುತರವಾಗಿ ಮುಂಬಯಿ ಕರ್ನಾಟಕದಲ್ಲಿ ಮರಾಠಿಯ ಶಾಲೆಗಳೇ ಹೆಚ್ಚಾಗಿದ್ದವು. ಇಂಗ್ಲಿಷ್ ರಾಜ್ಯದ ಪ್ರಾರಂಭದ ಕಾಲಕ್ಕೆ ಇಲ್ಲಿಯ ಮುಖ್ಯಾಧಿಕಾರಿಗಳು ಮಹಾರಾಷ್ಟ್ರೀಯರೇ ಇದ್ದದರಿಂದ, ಮರಾಠೀಭಾಷೆಯು ಸರಕಾರೀ ಕಚೇರಿಗಳಲ್ಲಿ ಪ್ರಚಲಿತವಾದ ಭಾಷೆಯಾಗಿತ್ತು. ಆದ್ದರಿಂದ ವ್ಯಾಪಾರಸ್ತರೂ ಬ್ರಾಹ್ಮಣರೂ ಕೂಡ ತಮ್ಮ ಪತ್ರವ್ಯವಹಾರಗಳನ್ನು ಅದೇ ಭಾಷೆಯಲ್ಲಿ ಇಡುವ ಪರಿಪಾಠವು ಬಿದ್ದಿತ್ತು. ಆದುದರಿಂದ ಜನರಲ್ಲಿ ಕರ್ನಾಟಕ ಭಾಷೆಯ ಬಗ್ಗೆ ಅನಾಸ್ಥೆಯುಂಟಾಗಿ ಎಲ್ಲರೂ ತಮ್ಮ ಮಕ್ಕಳಿಗೆ ಮರಾಠೀ ಭಾಷೆಯನ್ನೇ ಕಲಿಸಲು ಅಪೇಕ್ಷಿಸುತ್ತಿದ್ದರು. ಚನ್ನಬಸವಪ್ಪನವರಾದರೂ ಶಾಲೆಯಲ್ಲಿ ಮರಾಠೀ ಭಾಷೆಯನ್ನೇ ಕಲಿತವರಾಗಿದ್ದರು. ಆ ಭಾಷೆಯಲ್ಲಿ ಮಾತಾಡಲಿಕ್ಕೂ ಬರೆಯಲಿಕ್ಕೂ ಅವರಿಗೆ ಬಹಳ ಚನ್ನಾಗಿ ಬರುತ್ತಿತ್ತು. ಹೀಗಿದ್ದರೂ ಅವರು ತಮ್ಮ ಮಾತೃಭಾಷೆಯನ್ನು ಮರೆತು ಬಿಡಲಿಲ್ಲ. ದೇಶಭಾಷೆಗಳ ಮಹತ್ವವನ್ನು ಅವರು ಪೂರ್ಣವಾಗಿ ತಿಳಿದವರಾಗಿದ್ದರು ಆದ್ದರಿಂದ ಕರ್ನಾಟಕಸ್ಥರಿಗೆ ಕನ್ನಡ ಜ್ಞಾನವೇ ವಿದ್ಯಾಪ್ರಸಾರಕ್ಕೆ ಉಪಯುಕ್ತವಾದುದೆಂದು ತಿಳಿದುಕೊಂಡು, ಅವರು ಆ ಭಾಷೆಯ ಶಾಲೆಗಳಿಗೆ ಬಹು ಪ್ರೋತ್ಸಾಹನ ಕೊಡಹತ್ತಿದರು. ರಸಲ್ ಥೊರೆಗಳಾದರೂ ಚನ್ನಬಸವಪ್ಪನವರಿಗೆ ಪೂರ್ಣವಾಗಿ ಸಹಾಯ ಮಾಡಹತ್ತಿದರು. ಇದರಿಂದ



ಧಾರವಾಡ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಕನ್ನಡ ಶಾಲೆಗಳು ಬಹು ತೀವ್ರವಾಗಿ ಬೆಳೆಯಹತ್ತಿದವು. ಅವು ಬೆಳೆದ ಹಾಗೆ ಜನರಲ್ಲಿಯೂ ಕನ್ನಡ ಭಾಷೆಯ ವಿಷಯವಾಗಿ ಪ್ರೀತಿಯೂ ಆದರವೂ ಮೆಲ್ಲಮೆಲ್ಲಗೆ ಬೆಳೆಯಹತ್ತಿದವು. ಈ ಮೇರೆಗೆ ಕರ್ನಾಟಕದಲ್ಲಿ ಶುದ್ಧವಾದ ವಿದ್ಯೆಯ ತಳಹದಿಯನ್ನು ಮೊದಲು ಊರಿದವರು ಚನ್ನಬಸವಪ್ಪನವರೇ ಎಂದು ನಿಶ್ಚಯಪೂರ್ವಕವಾಗಿ ಹೇಳಬಹುದು.

ಚನ್ನಬಸಪ್ಪನವರು ಕನ್ನಡ ಭಾಷೆಯನ್ನು ಪ್ರೋತ್ಸಾಹಿಸಲಕ್ಕೂ ಅದರ ಬಗ್ಗೆ ಜನರಲ್ಲಿ ಅಭಿಮಾನವನ್ನು ಹುಟ್ಟಿಸಲಿಕ್ಕೂ ಅನೇಕ ಉಪಾಯಗಳನ್ನು ಕೈಕೊಂಡರು. ತಮ್ಮ ಮಾಸ್ತರ ಜನರಲ್ಲಿ ಯಾರಾದರೂ ಮರಾಠೀ ಭಾಷೆಯನ್ನು ಉಪಯೋಗಿಸುತ್ತಿದ್ದರೆ ಅವರು ಕೂಡಲೇ ತಮ್ಮ ಸ್ವಾಭಾವಿಕ ಮರ್ಮೋಕ್ತಿಗಳಿಂದ ಅವರಿಗೆ ಸಿಟ್ಟು ಮಾಡಿ ಹೇಳುತ್ತಿದ್ದರು. ಅನೇಕ ಮಾಸ್ತರರು ಮರಾಠೀ ಮಿಶ್ರವಾದ ಅಶುದ್ಧ ಕನ್ನಡ ಭಾಷೆಯಲ್ಲಿ ತಮ್ಮ ರಿಪೋರ್ಟುಗಳನ್ನು ಬರೆಯುತ್ತಿದ್ದರು. ಅಂಥವುಗಳನ್ನು ಚನ್ನಬಸವಪ್ಪನವರು ತಿದ್ದಿ, ಇಂಥ ಕೆಟ್ಟ ಭಾಷೆಯನ್ನು ಉಪಯೋಗಿಸಬಾರದೆಂದು ಅವರಿಗೆ ಎಚ್ಚರು ಹೇಳುತ್ತಿದ್ದರು. ಯಾವನಾದರು ಮಾಸ್ತರನು ತನ್ನ ವಿದ್ಯಾರ್ಥಿಗಳಿಗೆ ಮರಾಠಿಯಲ್ಲ ಮಗ್ಗೀಕಲಿಸುತ್ತಿದ್ದರೆ—"ನೀನು ಕನ್ನಡದಲ್ಲಿ ಮಗ್ಗಿಯನ್ನು ಕಲಿಸಿದ್ದರೆ, ಇಷ್ಟು ದಿವಸಗಳ ವರೆಗೆ ಪಗಾರ ತಿಂದದ್ದು ಸಾರ್ಥಕವಾಗಿ ನಮ್ಮ ಕರ್ನಾಟಕ ದೇಶಕ್ಕೆ ಭೂಷಣ ತರುತ್ತಿದ್ದಿ" ಎಂದು ಕಠಿಣವಾಗಿ ನುಡಿಯುತ್ತಿದ್ದರು. ಅವರು ತಮ್ಮ ಮಾಸ್ತರ ಜನರಿಗೆ ಶುದ್ಧ ಕನ್ನಡವನ್ನು ಉಪಯೋಗಿಸುತ್ತಿರಬೇಕೆಂದು ಸರ್ಕ್ಯುಲರಗಳನ್ನು ಮೇಲಿಂದ ಮೇಲೆ ಪ್ರಸಿದ್ಧಿಸುತ್ತಿದ್ದರು. ಯಾರಾದರು ಮರಾಠಿಯಲ್ಲಿ ಸಹಿ ಮಾಡಿದರೆ ಅಥವಾ ಅದೇ ಮೇರೆಗೆ ತಮಗೆ ಮರಾಠೀ ಬರುತ್ತದೆಂಬ ಹೆಮ್ಮೆಯಿಂದ ಆ ಭಾಷೆಯಲ್ಲಿ ಮಾತಾಡ ಹೋದರೆ, ಅವರ ತಪ್ಪನ್ನು ಅವರಿಗೆ ತಿಳಿಸಿ, ಕನ್ನಡವನ್ನೇ ಉಪಯೋಗಿಸಬೇಕೆಂದು ಅವರಿಗೆ ಹೇಳುತ್ತಿದ್ದರು. ಅದೇ ಮೇರೆಗೆ ಯಾರಾದರು ತಮ್ಮ ಲೆಖ್ಖವನ್ನು ಇಲ್ಲವೇ ಪತ್ರಗಳನ್ನು ಮರಾಠಿಯಲ್ಲಿ ಬರೆಯುತ್ತಿದ್ದರೆ, ಅವರಿಗೆ ಸ್ವಭಾಷೆಯನ್ನೇ ಉಪಯೋಗಿಸತಕ್ಕದ್ದೆಂದು ಸಿಟ್ಟು ಮಾಡಿ ಹೇಳುತ್ತಿದ್ದರು. ಈ ಮೇರೆಗೆ ಚನ್ನಬಸಪ್ಪನವರು ತಾವು ಹೋದ ಹೋದಲ್ಲಿ ಕನ್ನಡ ಭಾಷೆಯ ಮತ್ತು ಕರ್ನಾಟಕದ ವಿಷಯವಾಗಿ ಜನರಿಗೆ ತಿಳಿಸಿ ಹೇಳುವ ಯಾವ ಸಂಧಿಯನ್ನು ವ್ಯರ್ಥ

ವಾಗಿ ಕಳೆದುಕೊಳ್ಳುತ್ತಿದ್ದಿಲ್ಲ. ಚನ್ನಬಸಪ್ಪನವರು ಆ ಕಾಲಕ್ಕೆ ಒಬ್ಬ ದೊಡ್ಡ ವಿದ್ಯಾಧಿಕಾರಿಗಳಿದ್ದು, ಅವರು ಈ ವಿಷಯಗಳ ಬಗ್ಗೆ ಮೇಲಿಂದ ಮೇಲೆ ಪ್ರಸ್ತಾಪಿಸಿ ಜನರಲ್ಲಿ ಅವುಗಳನ್ನು ಬಿಂಬಿಸಲು ಸದಾ ತತ್ಪರರೂ ಸಮರ್ಥರೂ ಇದ್ದದರಿಂದ, ಅವರ ಉಪದೇಶದ ಪರಿಣಾಮವು ಜನರ ಮೇಲೆ ಬಹಳವಾಗುತ್ತಿತ್ತು. ಅದರಿಂದಲೇ ಧಾರವಾಡ ಜಿಲ್ಲೆಯು ಈಗ ಸಂಪೂರ್ಣ ಕನ್ನಡ ಜಿಲ್ಲೆಯಾಗಿರುತ್ತದೆ. ಆದರೆ ಆ ಕಾಲಕ್ಕೆ ಹೀಗೆ ಪ್ರಯತ್ನಿಸುವ ಅಧಿಕಾರಿಗಳು ಬೆಳಗಾವ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಇರದ್ದರಿಂದ, ಆ ಜಿಲ್ಲೆಗಳಲ್ಲಿ ಮೇಲೆ ಕಾಣಿಸಿದಂಥ ನ್ಯೂನತೆಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಇನ್ನೂ ದೃಗ್ಗೋಚರವಾಗುತ್ತವೆ.

ಪ್ರಥಮದಲ್ಲಿ ಚನ್ನಬಸವಪ್ಪನವರಿಗೆ ಈ ಕೆಲಸದಲ್ಲಿ ಅನೇಕ ತೊಂದರೆಗಳು ತಟ್ಟಿದವು. ಅವರ ದೇಶಬಾಂಧವರೇ ಅವರನ್ನು ಮೊದಲು ಹೀಯಾಳಿಸತೊಡಗಿದರು. ಮತ್ತು ಅನೇಕರಂತು ಅವರಿಗೆ ಹಗೆಗಳಾದರು. ಆದರೆ ಚನ್ನಬಸವಪ್ಪನವರು ಸ್ವಾಭಾವಿಕವಾಗಿ ಬಹಳ ಗಟ್ಟಿಗರೂ ಸಾಹಸಿಗರೂ ಇದ್ದದರಿಂದ, ಅವರು ಯಾವದನ್ನೂ ಲಕ್ಷಿಸುತ್ತಿದ್ದಿಲ್ಲ. ಅವರು ತಮ್ಮ ಕರ್ತವ್ಯಕರ್ಮವನ್ನು ತಿಳಿದವರಾಗಿದ್ದದರಿಂದ, ಅವರು ಅಂಜದೆ ಅದರಲ್ಲಿ ಎಡೆಬಿಡದೆ ತೊಡಗುತ್ತಿದ್ದರು. ಇಂಥ ನಿರಂತರ ಪ್ರಯತ್ನಗಳಿಂದಲೇ ಸುಕಾರ್ಯಗಳ ಸುಖಾವಹ ಪರಿಣಾಮಗಳು ಮೊದಲು ಮೆಲ್ಲಮೆಲ್ಲಗೆ ಜನರಲ್ಲಿ ತಲೆದೋರಹತ್ತುತ್ತವೆ. ಆ ಮೇಲೆ ಸ್ವಲ್ಪಕಾಲದಲ್ಲಿ ಅವು ಹೆಚ್ಚಾಗಿ ಪಸರಿಸಿ, ಅವುಗಳ ಸುಪರಿಣಾಮಗಳು ಸ್ಪಷ್ಟವಾಗಿ ಕಂಗೊಳಿಸಹತ್ತುತ್ತವೆ.

### ವಾಙ್ಮಯ ಪ್ರೋತ್ಸಾಹ.

ಚನ್ನಬಸವಪ್ಪನವರು ಕನ್ನಡ ಭಾಷೆಯ ಬಗ್ಗೆ ಮಾಡಿದ ಈ ಪ್ರಯತ್ನಗಳ ಸುಪರಿಣಾಮಗಳು ಸ್ವಲ್ಪ ದಿವಸಗಳಲ್ಲಿಯೇ ತಲೆದೋರಹತ್ತಿದವು. ಅವರ ಪ್ರಯತ್ನಗಳಿಂದ ಕನ್ನಡ ಶಾಲೆಗಳು ಎಲ್ಲಕಡೆಗೆ ಪಸರಿಸಹತ್ತಿದಹಾಗೆ ಕನ್ನಡ ಓದುಬರಹ ಬಲ್ಲವರೂ ಹೆಚ್ಚಾಗಹತ್ತಿದರು. ಧಾರವಾಡ ಜಿಲ್ಹೆಯಲ್ಲಿ ಮೊದಲು ವ್ಯಾಪಾರಸ್ತರು ಮರಾಠಿಯಲ್ಲಿ ತಮ್ಮ ಲೆಖ್ಖಪತ್ರಗಳನ್ನು ಇಡುತ್ತಿದ್ದರು. ಇವರು ಹಿಂದುಗಡೆ ಅವುಗಳನ್ನು ಕನ್ನಡದಲ್ಲಿಯೇ ಇಡಹತ್ತಿದರು. ಅದರಂತೆಯೇ ಕನ್ನಡ ಗ್ರಂಥಕಾರರೂ ಲೇಖಕರೂ



ಮೆಲ್ಲಮೆಲ್ಲಗೆ ಹೊರಬೀಳಹತ್ತಿದರು. ಗ್ರಾಮಗಳಲ್ಲಿ ಇಂಥವರು ಯಾರಾದರೂ ಇದ್ದರೆ ಚನ್ನಬಸಪ್ಪನವರು ಅವರನ್ನು ಬಹಳ ಪ್ರೋತ್ಸಾಹಿಸುತ್ತಿದ್ದರು. ಮತ್ತು ಅವರ ಕೂಡ ಅವರು ಬಹು ಮಿತ್ರತ್ವದಿಂದ ನಡೆಯುತ್ತಿದ್ದರು. ಚನ್ನಬಸವಪ್ಪನವರಾದರೂ ಸ್ವತಃ ಕೆಲವು ಗ್ರಂಥಗಳನ್ನು ಬರೆದರು. ಅವರು ತಮ್ಮ ಪ್ರೀತಿಯವಿಷಯವಾದ ಗಣಿತದಲ್ಲಿ ೨ ಪುಸ್ತಕಗಳನ್ನು ರಚಿಸಿದರು. ಈ ಪುಸ್ತಕಗಳು ಚನ್ನಬಸವಪ್ಪನವರು ತೀರಿದ ಮೇಲೆ ೧೦—೧೫ ವರ್ಷಗಳ ವರೆಗೆ ಕನ್ನಡಶಾಲೆಗಳಲ್ಲಿ ಕ್ರಮಿಕ ಪುಸ್ತಕಗಳಾಗಿ ಉಪಯೋಗಿಸಲ್ಪಡುತ್ತಿದ್ದವು. ಅದೇ ಮೇರೆಗೆ ಅವರು ಶೇಕ್ಸಪೀಯರ್ ಕವಿಯ "ಕಾಮಿಡಿ ಅಫ್ ಎರರ್ಸ" ಮತ್ತು "ಮ್ಯಾಕ್ಬೆಥ್" ಎಂಬ ಎರಡು ಇಂಗ್ಲಿಷ ನಾಟಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿದರು. ಇವುಗಳ ಭಾಷೆಯು ಅಷ್ಟು ಮೇಲ್ತರದ್ದಿರದಿದ್ದರೂ, ಇವು ಚನ್ನಬಸವಪ್ಪನವರ ಮನಸ್ಸಿನ ಒಲವನ್ನೂ ಕನ್ನಡಭಾಷೆಯ ಸೇವೆಯನ್ನು ಮಾಡಬೇಕೆಂಬ ಅವರ ಆಕಾಂಕ್ಷೆಯನ್ನೂ ಪ್ರಕಟಿಸುತ್ತವೆ. ಗ್ರಾಮಾಂತರಗಳಲ್ಲಿ ಸರಕಾರೀ ಶಾಲೆಗಳು ಸ್ಥಾಪಿಸಲ್ಪಡಹತ್ತಿದುದರಿಂದ, ಹಳೇ ಪದ್ಧತಿಯ ಅಯ್ಯನವರ ಶಾಲೆಗಳು ಬರಬರುತ್ತ ಕಡಿಮೆಯಾಗಹತ್ತಿದವು. ಈ ಮೇರೆಗೆ ಅಯ್ಯನವರಿಗೆ ಕೆಲಸ ತಪ್ಪಿಹೋಗಲು, ಚನ್ನಬಸವಪ್ಪನವರು ಅಂಥವರನ್ನು ಸರಕಾರೀ ಶಾಲೆಗಳಲ್ಲಿ ಮಾಸ್ತರರಾಗಿ ನೇಮಿಸಿಕೊಳ್ಳಹತ್ತಿದರು. ಅವರಲ್ಲಿ ಯಾರಾದರೂ ಕನ್ನತ ಅಭ್ಯಾಸವನ್ನು ಚನ್ನಾಗಿ ಮಾಡಿದವರಿದ್ದರೆ, ಅವರಿಗೆ ಚನ್ನಬಸವಪ್ಪನವರು ಬಹಳ ಪ್ರೋತ್ಸಾಹಿಸುತ್ತಿದ್ದರು. ಇಂಥವರಲ್ಲಿ ಗಂಗಾಧರ ಮಡಿವಾಳೇಶ್ವರ ತೂರಮರಿ ಮತ್ತು ಶಾಂತವೀರ ರಾಚಿದೇವ ಕಿತ್ತೂರ ಇವರು ಮುಖ್ಯರು. ಗಂಗಾಧರಯ್ಯನವರು ಕನ್ನಡ ಟ್ರೇನಿಂಗ ಕಾಲೇಜವಲ್ಲಿ ಕನ್ನಡ ಶಿಕ್ಷಕರೂ ಆ ಮೇಲೆ ಅಸಿಸ್ಟಂಟಟ್ರಾನ್ಸಲೇಟರರೂ ಆಗಿದ್ದರು. ಈ ಕಾಲಕ್ಕೆ ಕನ್ನಡ ಶಾಲೆಗಳು ಹೆಚ್ಚಾಗಹತ್ತಿದ್ದರಿಂದ, ಕನ್ನಡ ಕ್ರಮಿಕ ಪುಸ್ತಕಗಳ ಅವಶ್ಯಕತೆಯು ಬಹಳೇ ಬೀಳಹತ್ತಿತು. ಆಗ ಚನ್ನಬಸವಪ್ಪನವರು ಕೆಲವು ಕ್ರಮಿಕ ಪುಸ್ತಕಗಳನ್ನು ಗಂಗಾಧರಯ್ಯನವರಕಡೆಯಿಂದ ಬರೆಯಿಸಿದರು. ಈ ಪುಸ್ತಕಗಳು ಅನೇಕ ವರ್ಷಗಳವರೆಗೆ ಶಾಲೆಗಳಲ್ಲಿ ಉಪಯೋಗಿಸಲ್ಪಡುತ್ತಿದ್ದವು. ಆಗಿನ ವಿದ್ಯಾಧಿಕಾರಿಗಳು ಹಳೆಗನ್ನಡ ಗ್ರಂಥಭಾಂಡಾರವನ್ನು ತೀರ ಅರಿಯದವರಾಗಿದ್ದರಿಂದ, ಅವರು ಮರಾಠಿ ಪದ್ಧತಿಯ ಕವಿತೆಗಳನ್ನು ಕೂಡಿಸಿ ಕನ್ನಡ

ಕ್ರಮಿಕ ಕವಿತೆಯ ಪುಸ್ತಕಗಳನ್ನು ರಚಿಸುವದರಲ್ಲಿ ತೊಡಗಿದ್ದರು. ಆದರೆ ಗಂಗಾಧರಯ್ಯನವರು ಹಳೆಗನ್ನಡವನ್ನು ಚನ್ನಾಗಿ ಬಲ್ಲದವರಾದ್ದರಿಂದ ಪ್ರಾಚೀನ ಕನ್ನಡ ಮಹಾಕವಿಗಳ, ದಾಸರ, ಮತ್ತು ಲಿಂಗಾಯತ ಸಾಧುಗಳ ನೈತಿಕಪದ್ಯಗಳನ್ನು ಕ್ರಮಿಕ ಪುಸ್ತಕಗಳಲ್ಲಿ ಸಂಗ್ರಹಿಸಿ, ಹಳೆಗನ್ನಡದ ಮಹತ್ವವನ್ನು ನಮ್ಮ ಕರ್ನಾಟಕಸ್ತರಿಗೆ ಮೊದಲು ಅರಿಕೆಮಾಡಿಕೊಟ್ಟರು. ಇದಲ್ಲದೆ ಹಳೆಗನ್ನಡ ಅಭ್ಯಾಸ ಮಾಡುವವರಿಗೆ ಉಪಯೋಗವಾಗುವಂತೆ ಇವರು ಒಂದು ಕನ್ನಡ ನಿಘಂಟನ್ನು ಸಹ ಬರೆದರು. ಇದು ಹಳೆಗನ್ನಡದ ಮೊದಲನೆಯ ನಿಘಂಟುವು. ಇದನ್ನು ಬರೆದದ್ದಕ್ಕಾಗಿ, ಸರಕಾರದವರು ಗಂಗಾಧರಯ್ಯನವರಿಗೆ ನಾಲ್ಕುಸಾವಿರ ರೂಪಾಯಗಳ ಇನಾಮನ್ನು ಕೊಟ್ಟರು. ಗಂಗಾಧರಯ್ಯನವರು ರಚಿಸಿದ ಕಾದಂಬರೀ ಗ್ರಂಥದ ಸೊಗಸನ್ನು ಕನ್ನಡನಾಡಿನಲ್ಲಿ ಅರಿಯದವರು ಯಾರೂ ಇರಲಿಕ್ಕಿಲ್ಲ. ಇದರಂತೆಯೇ ಶಾಂತವೀರ ರಾಚೀದೇವ ಕಿತ್ತೂರ ಇವರು ಹಳೆಗನ್ನಡದಲ್ಲಿ ಬಹು ಸಮರ್ಥರಾಗಿದ್ದರು. ಇವರು ಬೆಳಗಾವ ಹೈಸ್ಕೂಲಿನಲ್ಲಿಯೂ ಹಿಂದುಗಡೆ ಟ್ರೇನಿಂಗ ಕಾಲೇಜದಲ್ಲಿಯೂ ಕನ್ನಡ ಶಿಕ್ಷಕರಾಗಿದ್ದರು. ಇವರು ರಾಜಶೇಖರ ವಿಳಾಸದ ಕೆಲವು ಆಶ್ವಾಸಗಳಿಗೆ ಉತ್ತಮವಾದ ಟೀಕೆಯನ್ನು ಬರೆದಿರುವರು. ಈ ಮೇರೆಗೆ ಚನ್ನಬಸವಪ್ಪನವರ ಪ್ರೋತ್ಸಾಹನದಿಂದ ಜನರಲ್ಲಿ ಕನ್ನಡ ವಿದ್ಯೆಯಬಗ್ಗೆ ಪ್ರಿತಿಯು ಹುಟ್ಟತೊಡಗಿತು. ಮತ್ತು ಈ ಕಾಲಕ್ಕೆ ಕೆಲವು ಗ್ರಂಥಕಾರರೂ ಉತ್ಪನ್ನರಾದರು. ಇಂಥವರಲ್ಲಿ ವೀರಭದ್ರ ಮಡಿವಾಳೇಶ್ವರಪಂಡಿತ, ಶೇಷೋ ರಾಮಚಂದ್ರ ಚೂರಮುರಿ, ವೆಂಗಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ, ಪಾಂಡುರಂಗ ಚಿಂತಾಮಣ ಪೇಟಕರ ಈ ಮಹನೀಯರು ಮುಖ್ಯರಿರುವರು. ಇವರೆಲ್ಲರೂ ಚನಬಸಪ್ಪನವರ ಸ್ನೇಹಿತರಿದ್ದು ಅವರಂತೆಯೇ ಕನ್ನಡಭಾಷೆಯ ಬಗ್ಗೆ ಮತ್ತು ಕರ್ನಾಟಕ ದೇಶದ ಬಗ್ಗೆ ನಿಶ್ಚಲವಾದ ಅಭಿಮಾನವನ್ನು ತಾಳಿದ್ದರು. ವೀರಭದ್ರ ಮಡಿವಾಳೇಶ್ವರ ಪಂಡಿತ ಇವರು ಮೊದಲು ಬೆಳಗಾವ ಹೈಸ್ಕೂಲಿನಲ್ಲಿ ಆಸಿಸ್ಟಂಟ ಮಾಸ್ತರರಾಗಿದ್ದು, ಹಿಂದುಗಡೆ ಮುನಸಿಫೀ ಪರೀಕ್ಷೆಯನ್ನು ಪಾಸಾಗಿ ಸಬಜಜ್ಜರಾದರು. ಇವರು ಚನ್ನಬಸವಪ್ಪನವರಿಂದ ಪ್ರೋತ್ಸಾಹಿಸಲ್ಪಟ್ಟು ಎರಡು ಕನ್ನಡ ಕ್ರಮಿಕ ಪುಸ್ತಕಗಳನ್ನು ರಚಿಸಿದರು. ಈ ಪುಸ್ತಕಗಳು ಪ್ರಾಥಮಿಕ ಶಾಲೆಗಳಲ್ಲಿ ಬಹಳ ದಿವಸಗಳ ವರೆಗೆ ಉಪಯೋಗಿಸಲ್ಪಡುತ್ತಿದ್ದವು. ವೆಂಕಟರಂಗೋ



ಕಟ್ಟಿಯವರು ಅರೇಬಿಯನ್ ನೈಟ್ಸದ ಭಾಷಾಂತರ, ಕನ್ನಡ ಕ್ರಮಿಕ ಪುಸ್ತಕಗಳು, ಪದಾರ್ಥ ವಿಜ್ಞಾನ ಶಾಸ್ತ್ರ ಇವೇ ಮೊದಲಾದ ಅನೇಕ ಗ್ರಂಥಗಳನ್ನು ಬರೆದು ಕನ್ನಡಕ್ಕೆ ಬಹು ಮಹತ್ವವಾದ ಸೇವೆಯನ್ನು ಮಾಡಿರುವರು. ಭುಜಂಗರಾವ ಹುಯಿಲ್‌ಗೋಳ ಇವರು ಈ ಕಾಲಕ್ಕೆ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಿದ್ದು ಇವರಾದರೂ ಖಗೋಲ ಶಾಸ್ತ್ರದ ಮೇಲೆ ಗ್ರಂಥವನ್ನು ಬರೆದಿದ್ದಾರೆ. ಪಾಂಡುರಂಗ ಚಿಂತಾಮಣ ಪೇಟಕರ ಇವರೂ ಕೆಲವು ಶಾಲೋಪಯೋಗೀ ಪುಸ್ತಕಗಳನ್ನು ರಚಿಸಿದ್ದಾರೆ. ಧಾರವಾಡದಲ್ಲಿ ಪ್ರಸಿದ್ಧ ಮಿಶನರಿಗಳಾದ ಕಿಟ್ಟೆಲ್ ಸಾಹೇಬರು ಒಂದು ಇಂಗ್ಲಿಷ್-- ಕನ್ನಡ ನಿಘಂಟನ್ನು ಬಹು ಶ್ರಮವಹಿಸಿ ಆಕಾಲದಲ್ಲಿ ರಚಿಸಿದರು. ಈ ಕೆಲಸದಲ್ಲಿ ಚನ್ನಬಸವಪ್ಪನವರು ಅವರಿಗೆ ಬಹಳ ಸಹಾಯ ಮಾಡಿದರು. ಚನ್ನಬಸವಪ್ಪನವರ ಸ್ನೇಹಿತರಾದ ಶೇಷೋ ರಾಮಚಂದ್ರ ಚೂರಮುರಿಯವರು ಸಂಸ್ಕೃತ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಪರಿವರ್ತಿಸಿದರು. ಇದು ಬಹು ಸೊಗಸಾದ ಗ್ರಂಥವೆಂದು ಇನ್ನೂ ಇದರ ಖ್ಯಾತಿಯು ಇದೆ. ಈ ಗ್ರಂಥವನ್ನು ಚೂರಮುರಿಯವರು ಚನ್ನಬಸವಪ್ಪನವರಿಗೆ ಬಹು ಅಭಿಮಾನದಿಂದ ಅರ್ಪಣಮಾಡಿದ್ದಾರೆ. ಚೂರಮುರಿಯವರ ಅರ್ಪಣ ಶ್ಲೋಕಗಳಲ್ಲಿ ಕನ್ನಡ ನುಡಿಯ ಬಗ್ಗೆ ಆ ಕಾಲಕ್ಕೆ ಜನರಲ್ಲಿ ಹುಟ್ಟಿದ ಒಂದು ತರದ ಸ್ಫೂರ್ತಿ ಮತ್ತು ಅಭಿಮಾನ ಇವುಗಳು ಬಹು ಚನ್ನಾಗಿ ವ್ಯಕ್ತವಾಗುವಂತೆ ಇವೆ. ಈ ಮೇಲ್ಕಂಡ ಮಹಾನುಭಾವರೆಲ್ಲರೂ ಈ ಕಾಲಕ್ಕೆ ತಮ್ಮಿಂದಾದಷ್ಟು ಕನ್ನಡ ಸೇವೆಯನ್ನು ಮಾಡಿದರು. ಮತ್ತು ಇವರು ವಿದ್ಯಾಖಾತೆಯನ್ನು ಸೇರಿ, ಜ್ಞಾನಪ್ರಸಾರದ ಶ್ರೇಷ್ಠ ಕಾರ್ಯದಲ್ಲಿ ತೊಡಗಿದರು.

ಈ ಮೇರೆಗೆ ಕನ್ನಡ ಓದುಬರಹ ಬಲ್ಲವರೂ ಕನ್ನಡ ಗ್ರಂಥಕಾರರೂ ಹೆಚ್ಚಾದ ಹಾಗೆ, ಕನ್ನಡ ಅಚ್ಚುಕೂಟಗಳೂ, ವರ್ತಮಾನ ಪತ್ರಗಳೂ ಮೆಲ್ಲಮೆಲ್ಲಗೆ ಹೊರಬೀಳಹತ್ತಿದವು. ಮೊದಲು ಕನ್ನಡ ಅಚ್ಚುಕೂಟ ತೆಗೆದವರು ಮಾದನಶೆಟ್ಟಿ ಕಲ್ಯಾಣಪ್ಪನವರು, ಅವರು ಅದರಬಗ್ಗೆ ಬಹಳ ಕಷ್ಟಬಟ್ಟರು. ಆದರೆ ಅದು ಸಿದ್ಧಿಸಲಿಲ್ಲ. ಆ ಮೇಲೆ ಹುಚ್ಚಯ್ಯಾ ವಿಭೂತಿಯವರು ಒಂದು ಕನ್ನಡಅಚ್ಚುಕೂಟನ್ನು ಇಟ್ಟು, ಅದರಲ್ಲಿಚಂದ್ರೋದಯವೆಂಬ ಒಂದು ವರ್ತಮಾನ ಪತ್ರವನ್ನು ಪ್ರಸಿದ್ಧಿಸಹತ್ತಿದರು. ಇದೇ ಕಾಲಕ್ಕೆ ಪುರಂದರದಾಸ, ಕನಕದಾಸ, ನಿಜಗುಣಶಾಸ್ತ್ರಗಳು, ಬತ್ತೀಸ

ಮತಳಿ, ಮೊದಲಾದ ಹಳೇ ಧಾರ್ಮಿಕ ಮತ್ತು ಪೌರಾಣಿಕ ಗ್ರಂಥಗಳು ಅಚ್ಚುಕೂಟಗಳಲ್ಲಿ ಹೊರಬೀಳಹತ್ತಿದವು. ಈ ಮೇರೆಗೆ ೩೦-೪೦ ವರ್ಷಗಳ ಹಿಂದೆ ಉತ್ತರಕರ್ನಾಟಕದಲ್ಲಿ ನಡೆದ ಜ್ಞಾನಪ್ರಸಾರದ ಪ್ರಯತ್ನಗಳಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಚನ್ನಬಸವಪ್ಪನವರೇ ಕಾರಣರಾದರು. ಅವರು ಈ ಭಾಗದಲ್ಲಿ ಕನ್ನಡ ಶಾಲೆಗಳನ್ನು ಬೆಳಿಸಿದ್ದರಿಂದಲೂ ಕನ್ನಡ ಪಂಡಿತರನ್ನು ಮುಂದಕ್ಕೆ ತಂದು, ಅವರನ್ನು ಗ್ರಂಥ ರಚನೆಯಲ್ಲಿ ತೊಡಗಿಸಿದ್ದರಿಂದಲೂ ತಮ್ಮ ಅಪ್ರತಿಮ ಬೋಧಾಶಕ್ತಿ ಮತ್ತು ಕೃತಿಗಳಿಂದ ಕನ್ನಡ ಅಭಿಮಾನವನ್ನು ಸರಿಕರಲ್ಲಿಯೂ ಕೆಳಗಿನವರಲ್ಲಿಯೂ ಸುಶಿಕ್ಷಿತರಲ್ಲಿಯೂ ಬೆಳಿಸಿದ್ದರಿಂದಲೂ ಈ ಸುಪರಿಣಾಮಗಳು ತಲೆದೋರಹತ್ತಿದವು. ಆ ಕಾಲಕ್ಕೆ ಇಂಥ ಪ್ರಯತ್ನಗಳು ನಡೆಯದೆ ಹೋಗಿ, ಒಂದು ವೇಳೆ ಮುಂಬಯಿ ಕರ್ನಾಟಕಸ್ಥರು ಸ್ವಭಾಷೆಯನ್ನು ಬಿಟ್ಟು ಕೊಟ್ಟು, ಪರಭಾಷೆಗೆ ಅಂಟಿಕೊಂಡು, ಅದನ್ನೇ ಅವರು ಶಾಲೆಗಳಲ್ಲಿ ಕಲಿಯುತ್ತ ಕುಳಿತಿದ್ದರೆ, ಮೇಲ್ಕಂಡ ಪ್ರಯತ್ನಗಳು ಇಲ್ಲಿ ಏನೂ ಸಾಗದೆ ಜನರು ಇನ್ನೂ ಅಂಧಕಾರದಲ್ಲಿಯೇ ಉಳಿದು ಬಿಡುತ್ತಿದ್ದರು.

ಈ ವರೆಗೆ, ನಾವು ಚನ್ನಬಸವಪ್ಪನವರು ವಿದ್ಯಾಖಾತೆಯನ್ನು ಸೇರಿ ವಿದ್ಯಾಪ್ರೋತ್ಸಾಹನದಬಗ್ಗೆ ಮಾಡಿದ ನಾನಾವಿಧ ಪ್ರಯತ್ನಗಳನ್ನೂ ಅವುಗಳಿಂದ ಕರ್ನಾಟಕದೇಶದ ಮೇಲೆ ಆದ ಸುಪರಿಣಾಮಗಳನ್ನು ವಿವರಿಸಿದೆವು. ಇನ್ನು ಮೇಲೆ ಅವರ ಧಾರ್ಮಿಕ ವಿಚಾರಗಳ ವಿಷಯವಾಗಿಯೂ ಲಿಂಗಾಯತ ಸಮಾಜಕ್ಕೋಸ್ಕರ ಅವರು ಮಾಡಿದ ಪ್ರಯತ್ನಗಳ ವಿಷಯವಾಗಿಯೂ ಹೇಳುವೆವು.

### ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳು.

ಚನ್ನಬಸವಪ್ಪನವರು ನಾಸ್ತಿಕರಿದ್ದರೆಂತಲೂ ಧರ್ಮಶ್ರದ್ಧೆ ಇಲ್ಲದವರಿದ್ದರೆಂತಲೂ ಅವರಿಗೆ ಅನೇಕರು ಬಹಳ ದೋಷವಿಡುತ್ತಾರೆ. ಚನ್ನಬಸವಪ್ಪನವರು ಒಮ್ಮೆ ಒಂದು ಕೋರ್ಟಿನಲ್ಲಿ ಸಾಕ್ಷೀ ಹೇಳಬೇಕಾಗಿತ್ತು. ಆಗ ಪ್ರತಿಜ್ಞೆ ಮಾಡುವ ಪ್ರಸಂಗ ಬರಲು, ಅವರು ದೇವರ ಹೆಸರಿನಿಂದ ಆಣೆಮಾಡಿ ನಿಜವಾಗಿ ಹೇಳುತ್ತೇನೆಂದು ಅನ್ನಲಿಕ್ಕೆ ಒಪ್ಪದೆ, ನಾನು ಸತ್ಯವಾಗಿಯೂ ಪ್ರಮಾಣಪೂರ್ವಕವಾಗಿಯೂ ನಿಜವನ್ನೇ ಹೇಳುತ್ತೇನೆ, ಎಂದು ಪ್ರತಿಜ್ಞೆ ಮಾಡಿ, ತಮ್ಮ ಸಾಕ್ಷಿ ಹೇಳತೊಡಗಿದರು. ಇದರಿಂದ ಚನ್ನಬಸ



ವಪ್ಪನವರು ನಾಸ್ತಿಕರಿದ್ದರೆಂದು ಅನೇಕರು ಹೇಳುವದುಂಟು. ಆದ್ದರಿಂದ ಇದರ ನಿಜಸ್ಥಿತಿಯ ಬಗ್ಗೆ ವಿಚಾರಮಾಡುವದು ಅವಶ್ಯವಿರುತ್ತದೆ.

ಚನ್ನಬಸವಪ್ಪನವರು ಯಾವುದನ್ನೂ ಅಂಧತೆಯಿಂದ ಸ್ವೀಕರಿಸುವವರಾಗಿದ್ದಿಲ್ಲ. ಇದು ಆಧುನಿಕ ಪಾಶ್ಚಿಮಾತ್ಯ ಶಿಕ್ಷಣದ ಪರಿಣಾಮವಾಗಿರುತ್ತದೆ. ಅವರು ಶಾಸ್ತ್ರೀಯ ವಿಷಯಗಳನ್ನೂ ಗಣಿತ ಶಾಸ್ತ್ರವನ್ನೂ ಚನ್ನಾಗಿ ಬಲ್ಲವರಾಗಿದ್ದದ್ದಲ್ಲದೆ ಗ್ರೀಸ್, ರೋಮ ಮತ್ತು ಯುರೋಪ ಖಂಡದೊಳಗಿನ ಬೇರೆ ಬೇರೆ ದೇಶಗಳಲ್ಲಿ ಆಗಿಹೋದ ಆಧುನಿಕ ಮತ್ತು ಪ್ರಾಚೀನ ತತ್ವಜ್ಞಾನಿಗಳ ಗ್ರಂಥಗಳನ್ನು ಸದಾ ಅವಲೋಕಿಸುತ್ತಿದ್ದರು. ಅವರಲ್ಲಿದ್ದ ಗ್ರಂಥಭಾಂಡಾರವು ಬಹಳ ದೊಡ್ಡದಿತ್ತು. ಈ ಮೇರೆಗೆ ಪಾಶ್ಚಿಮಾತ್ಯ ಶಿಕ್ಷಣವನ್ನು ಹೊಂದಿದ ಮನುಷ್ಯನು ಏನಾದರೊಂದು ಹಳೇ ಗ್ರಂಥದಲ್ಲಿದ್ದ ಮಾತ್ರದಿಂದ ಇಲ್ಲವೇ ಕಾಲಾಂತರದಿಂದ ರೂಢಿಯಲ್ಲಿದ್ದ ಮಾತ್ರದಿಂದ ಅದು ಸತ್ಯವೆಂದು ನಂಬಲಾರನು. ಚನ್ನಬಸವಪ್ಪನರು ಈ ತರದ ಮನಸ್ಸಿನ ಪ್ರವೃತ್ತಿಯುಳ್ಳವರಾಗಿದ್ದರು. ಆದ್ದರಿಂದ ಅವರು ನಮ್ಮಲ್ಲಿಯ ಸಾಮಾಜಿಕ ದುಷ್ಟ ರೂಢಿಗಳನ್ನೂ ಧರ್ಮದ ಹೆಸರಿನಿಂದ ಮಾಡುವ ಅನೇಕ ಮೂಢ ಧರ್ಮಾಚಾರಗಳನ್ನೂ ಬಹಳ ಹಳಿಯುತ್ತಿದ್ದರು. ಒಂದು ಸಾರೆ ಅವರು ಒಬ್ಬ ಶಾಸ್ತ್ರಿಗಳ ಕೂಡ ಊಟಕ್ಕೆ ಕುಳಿತಿದ್ದರು. ಆಗ ಅವರು ಹತ್ತರಿದ್ದ ತಂಬಿಗೆಯನ್ನು ಎಡಗೈಯ್ಯಿಯಿಂದ ಎತ್ತಿ ನೀರು ಕುಡಿಯುತ್ತಿರುವಾಗ್ಗೆ, ಶಾಸ್ತ್ರಿಗಳು ಚನ್ನಬಸವಪ್ಪನವರಿಗೆ— "ಅಣ್ಣನವರೇ ಎಡಗೈ ಮಾತ್ರ ಹಚ್ಚಿ ಹೀಗೆ ನೀರು ಕುಡಿದರೆ ಅದು ಶರೇ ಕುಡಿದ ಹಾಗಾಗುತ್ತದೆ. ಅದಕ್ಕೆ ಬಲಗೈ ಹಚ್ಚಿ ಕುಡಿಯತಕ್ಕದ್ದು" ಎಂದು ಅನ್ನಲು, ಅದಕ್ಕೆ ಅವರು—"ಅದು ಹಾಗೆ ಹೇಗಾದೀತು? ಒಂದು ತಂಬಿಗೆಯಲ್ಲಿ ಶರೇ ಹಾಕಿ ಬಲಗೈಯ್ಯಿಂದ ಕುಡಿದರೆ, ನೀರು ಕುಡಿದಂತೆ ಆಗುವದೋ ಹ್ಯಾಗೆ?" ಎಂದು ತಿರುಗಿ ಪ್ರಶ್ನಮಾಡಲು, "ಅದು ಹೇಗಾದೀತು" ಎಂದು ಶಾಸ್ತ್ರಿಗಳು ಅಂದಕೂಡಲೆ, "ಹಾಗಾದರೆ ನೀರು ಎಡಗೈಯ್ಯಿಂದ ಕುಡಿದಮಾತ್ರಕೆ ಅದು ಶರೇ ಹೇಗಾದೀತು? ಎಡಗೈಯ್ಯಿಂದ ಕುಡಿದರೇನು ಬಲಗೈಯ್ಯಿಂದ ಕುಡಿದರೇನು, ನೀರಿಗೆ ನೀರೇ, ಶರೆಗೆ ಶರೆಯೇ ಆಗುವದು. ನೀರು ಇದ್ದದ್ದು ಶರೆಯಾಗಲಾರದು, ಶರೆ ಇದ್ದದ್ದು ನೀರಾಗಲಾರದು" ಎಂದು ಅಂದರು. ಇದೇಮೇರೆಗೆ ಅವನು ಪ್ರಚಾರದಲ್ಲಿದ್ದ ಅನಿಷ್ಟ ರೂಢಿಗಳನ್ನೂ ಮೂಢಾಚಾರಗಳನ್ನೂ ತೀಕ್ಷ್ಣ ಶಬ್ದಗಳಿಂದ

ತಿರಸ್ಕರಿಸುತ್ತಿದ್ದರು. ಅವರು ಸ್ವಾಭಾವಿಕವಾಗಿ ಬಹು ತಿಳಿಯಾದ ಬುದ್ಧಿಯವರಾಗಿದ್ದರಿಂದ ಒಂದು ವಿಷಯದಲ್ಲಿದ್ದ ನ್ಯೂನತೆಯನ್ನು ಅವರು ಒಮ್ಮೆಲೇ ಕಂಡು ಹಿಡಿಯುತ್ತಿದ್ದರು. ಮತ್ತು ಅದನ್ನು ಅವರು ತಮ್ಮ ಮರ್ಮಭೇದಕಗಳಾದ ಸಮಯೋಚಿತ ಸ್ಪಷ್ಟ ಶಬ್ದಗಳಿಂದ ಜನರ ಮುಂದಿಡುತ್ತಿದ್ದರು. ಇದು ಹಳೇ ಸಾಂಪ್ರದಾಯಕರ ಮನಸ್ಸಿಗೆ ಬಹಳ ಹತ್ತುತ್ತಿತ್ತು. ಇದರಿಂದ ಅವರು ಚನ್ನಬಸವಪ್ಪನವರು 'ಧರ್ಮಲಂಡರೆಂತಲೂ ನಾಸ್ತಿಕರೆಂತಲೂ' ಅವರಿಗೆ ಅನ್ನುತ್ತಿದ್ದರು.

ಆದರೆ ಅನೇಕರು ಸ್ವೈಚ್ಛಾಚಾರಿಗಳಾಗಿ ಯಾವ ವಿಚಾರವನ್ನೂ ಮಾಡದೆ ತಮಗೆ ಬೇಡಾದದ್ದನ್ನೆಲ್ಲ ಅವಿಚಾರವೆಂದು ಹಳಿಯುತ್ತಿರುತ್ತಾರೆ. ಧರ್ಮ ಮೂಢತೆಯೂ ಧಾರ್ಮಿಕ ಡಂಭಾಚಾರವೂ ಎಷ್ಟು ಹಾನಿಕಾರಕಗಳೋ ಅಷ್ಟೇ ಇಂಥ ಧಾರ್ಮಿಕ ಸ್ವೇಚ್ಛಾವೃತ್ತಿಯೂ ಸಮಾಜಕ್ಕೆ ಹಾನಿಕಾರಕವು. ಆದರೆ ಚನ್ನಬಸವಪ್ಪನವರನ್ನು ಇಂಥವರಲ್ಲಿ ಎಣಿಸಲಾಗದು. ಅವರು ವಿದ್ವಾಂಸರಿದ್ದರು. ಅವರ ವಿಷಯ ವ್ಯಾಸಂಗವು ಬಹಳ ದೊಡ್ಡದಾಗಿತ್ತು. ಅವರು ಅನೇಕ ವರ್ಷಗಳವರೆಗೆ ತಮ್ಮ ಬಳಿಯಲ್ಲಿ ಒಬ್ಬ ಪಂಡಿತನನ್ನು ಇಟ್ಟುಕೊಂಡು, ಹಿಂದೂ ಧರ್ಮಶಾಸ್ತ್ರಗಳನ್ನು ಪರಶೀಲನೆ ಮಾಡುತ್ತಿದ್ದರು. ಎಲ್ಲಾದರೂ ಆರೂಢರೂ ವಿದ್ವಾಂಸರೂ ಸ್ವಾಮಿಗಳೂ ಇದ್ದರೆ, ಅಲ್ಲಿಗೆ ತಪ್ಪದೆ ಹೋಗಿ, ತತ್ವವಿಚಾರಗಳ ಬಗ್ಗೆ ಅವರಗೂಡ ಪ್ರಸ್ತಾಪ ನಡಿಯಿಸುತ್ತಿದ್ದರು. ಅವರು ಇಂಥ ಗಹನ ವಿಷಯಗಳನ್ನು ಜನರ ಮುಂದೆ ಮೇಲಿಂದ ಮೇಲೆ ತೆಗೆದು, ಅವರ ವಿಚಾರಗಳನ್ನು ಕೇಳಿಕೊಳ್ಳುತ್ತಿದ್ದರು. ಒಂದು ಸಾರೆ ಅವರ ಒಬ್ಬ ಪ್ರೀತಿಯ ಸ್ನೇಹಿತನು— "ಚನ್ನಬಸವಪ್ಪನವರೇ, ಜನರು ನಿಮಗೆ ನಾಸ್ತಿಕರೆಂದೆನ್ನುತ್ತಾರೆ. ಇದರ ಕಾರಣವೇನು? ಮತ್ತು ಕಂಡ ಕಂಡ ಜನರಿಗೆಲ್ಲ ನೀವು ದೇವರು ಇದ್ದಾನೋ ಇಲ್ಲವೋ? ಎಂದು ಪ್ರಶ್ನಮಾಡುವ ಕಾರಣವೇನು? ಎಂದು ಕೇಳಿದನು. ಅದಕ್ಕೆ ಅವರು— "ಹೌದು, ಹೌದು, ನಾನು ನಾಸ್ತಿಕನೇ ಸರಿ. ಯಾಕಂದರೆ ಜಗನ್ನಿರ್ಮಾಣಕನಾದ ದೇವರ ಅಗಾಧವಾದ ಮಹಾತ್ಮೆಯನ್ನು ತಿಳಿದವರೇ ಆಸ್ತಿಕರು. ಆ ಸೃಷ್ಟಿಕರ್ತನ ಮಹಿಮೆಯನ್ನು ತಿಳಿಯದವರೆಲ್ಲರೂ ನಾಸ್ತಿಕರು. ಅಂದಬಳಿಕ ಆ ಸೃಷ್ಟಿಕರ್ತನ ಅಗಾಧವಾದ ಮಹಾತ್ಮೆಯು ನನಗೆ ತಿಳಿಯದ ಕಾರಣ ನಾನು ನಾಸ್ತಿಕನೇ ಸರಿ. ಜ್ವರ ಚಳಿ ಮುಂತಾದ ರೋಗಗಳನ್ನು ದೂರಮಾಡುವ ಕ್ವಿನಾ



ಯನ್ ಗಿಡವು ಅಮೇರಿಕದ ಕಾಡು ಇಂಡಿಯನ್ನರಿಂದ ಮೊದಲು ಶೋಧಿಸಲ್ಪಟ್ಟಂತೆಯೇ ದೇವರು ಇದ್ದಾನೋ ಇಲ್ಲವೋ ಎಂಬ ಈ ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಅತಿ ಕಾಡು ಸ್ಥಿತಿಯವರೇ ಕೊಟ್ಟು ನನ್ನ ಮನಸ್ಸನ್ನು ಯಾಕೆ ತೃಪ್ತಿಪಡಿಸಲಿಕ್ಕಿಲ್ಲ? ಆದ ಕಾರಣ ನಾನು ದೇವರು ಇದ್ದಾನೋ ಇಲ್ಲವೋ ಎಂದು ಕಂಡಕಂಡವರನ್ನು ಕೇಳುತ್ತೇನೆ" ಎಂದು ಹೇಳಿದರು. ಇದು ಒಬ್ಬ ನಾಸ್ತಿಕನ ಭಾಷಣವಲ್ಲ. ಆದರೆ ಇದು ಸತ್ಯಶೋಧಕ್ಕಾಗಿ ಹಾತೊರೆಯುತ್ತಿರುವ ಒಬ್ಬ ವಿದ್ವಾಂಸನ ಭಾಷಣವು. ಆದ್ದರಿಂದ ಚನ್ನಬಸವಪ್ಪನವರು ಎಲ್ಲರಗೂಡ, ನಾನಾ ಪ್ರಕಾರದ ವಾದವಿವಾದಗಳನ್ನು ಮಾಡುತ್ತಿದ್ದರು. ಒಮ್ಮೊಮ್ಮೆ ವೇದಾಂತಿಗಳ ವಾದವನ್ನೂ ಒಮ್ಮೊಮ್ಮೆ ನಾಸ್ತಿಕರ ವಾದವನ್ನೂ ಆಸ್ತಿಕರ ವಾದವನ್ನೂ ಮಾಡುತ್ತಿದ್ದರು. ಮುಸಲ್ಮಾನರ ಕೂಡ ಮತ್ತು ಕ್ರಿಶ್ಚನ್ನರ ಕೂಡ ಧಾರ್ಮಿಕ ವಾದಗಳಲ್ಲಿ ಆಗಾಗ್ಗೆ ತೊಡಗುವರು. ಒಮ್ಮೊಮ್ಮೆ ಅವರು ತಮಗೆ ಕಾಣುವ ಅತ್ಯಲ್ಪ ವಿಷಯಗಳ ಮತ್ತು ಜನರೂಢಿಗಳ ಬಗ್ಗೆ ದೀರ್ಘ ಆಲೋಚನೆ ಮಾಡಿ, ಅವುಗಳೊಳಗಿಂದ ಏನಾದರೂ ಒಂದು ಹೊಸ ವಿಚಾರವನ್ನು ತೆಗೆಯಲಿಕ್ಕೆ ಪ್ರಯತ್ನಿಸುವರು. ಅವರು ಒಮ್ಮೆ ರಾಣೇಬೆನ್ನೂರ ಶಾಲೆಯನ್ನು ಪರೀಕ್ಷಿಸಿ, ಒಂದು ಮಠದಲ್ಲಿ ಇಳಿದುಕೊಂಡಿದ್ದರು. ಆಗ ಒಬ್ಬ ಗೃಹಸ್ಥರಿಗೆ:— "ವಿಲಾಯತಿಯಲ್ಲಿ ಕೆಲವು ಜನರು ಗಡ್ಡದ ಕೂದಲುಗಳನ್ನೂ ಬಗಲಲ್ಲಿರುವ ಕೂದಲುಗಳನ್ನೂ ಬೋಳಿಸಿಕೊಳ್ಳುವದಿಲ್ಲ. ಯಾಕಂದರೆ, ಬೋಳಿಸಿಕೊಂಡರೆ ಉಪಯೋಗವಿಲ್ಲದ ಕೂದಲುಗಳನ್ನು ದೇವರು ಮಾಡಿರುವನೆಂದು, ದೇವರ ಸರ್ವಜ್ಞತ್ವಕ್ಕೆ ಭಂಗತಂದಂತಾಗುತ್ತದೆಂದು ತಿಳಿದು ಅವರು ಅವುಗಳನ್ನು ಬೋಳಿಸಿಕೊಳ್ಳುವದಿಲ್ಲ. ಆ ಕೂದಲುಗಳು ಸಹ ಉಪಯೋಗವಿರುತ್ತವೆಂದು ಆ ಜನರು ತಿಳಿದುಕೊಳ್ಳುತ್ತಾರೆ." ಎಂದು ಅಂದರು. ಈ ಮೇರೆಗೆ ಚನ್ನಬಸವಪ್ಪನವರು ಅತ್ಯಲ್ಪ ವಿಷಯಗಳನ್ನು ಸಹ ತೆಗೆದುಕೊಂಡು, ನಾನಾವಿಧವಾಗಿ ಚರ್ಚಿಸುತ್ತ ಗಹನ ವಿಚಾರಗಳಲ್ಲಿ ತೊಡಗುತ್ತಿದ್ದರು.

ಆದರೆ ಚನ್ನಬಸವಪ್ಪನವರು ಹೀಗೆ ತಮ್ಮ ವಿಚಾರಗಳನ್ನು ತಮ್ಮ ಮನಸ್ಸಿನಲ್ಲಿಯೇ ಇಟ್ಟುಕೊಂಡು, ಅವೇ ಉತ್ತಮವಾದವುಗಳೆಂದು ತಿಳಿದುಕೊಂಡು ಎಂದೂ ಇರುತ್ತಿದ್ದಿಲ್ಲ. ಅವರು ತಮ್ಮ ವಿಚಾರಗಳನ್ನು ಸಾರ್ವಜನಿಕ ಸಭೆಗಳಲ್ಲಿಯೂ ಸಂಭಾಷಣೆಗಳಲ್ಲಿಯೂ ಜನರ ಮುಂದೆ ಇಟ್ಟು

ಅವುಗಳ ಬಗ್ಗೆ ವಾದವಿವಾದ ಮಾಡಲಿಕ್ಕೆ ಯಾವಾಗಲು ಸಿದ್ಧರಿರುತ್ತಿದ್ದರು. ಮತ್ತು ಅವುಗಳನ್ನು ಯಾರಾದರು ಖಂಡನೆ ಮಾಡಲಿಕ್ಕೆ ಯತ್ನಿಸಿದರೆ, ಅವರು ಅದಕ್ಕೆ ಎಂದೂ ಅಸಂತೋಷಬಡದೆ, ಅವುಗಳಿಗೆ ಸಕಾರಣವಾಗಿ ತಮ್ಮ ಉತ್ತರವನ್ನು ಹೇಳುವರು. ಒಂದುಸಾರೆ ಧಾರವಾಡದಲ್ಲಿ ತೋಳಮಟ್ಟಿ ಸ್ವಾಮಿ ರಾಯರೆಂಬ ಒಬ್ಬ ಪ್ರಸಿದ್ಧ ಬ್ರಾಹ್ಮಣ ವಕೀಲರ ಮನೆಯಲ್ಲಿ ಲಗ್ನಸಮಾರಂಭವು ಬಹಳ ವೈಭವದಿಂದ ನಡೆದಿತ್ತು. ಆ ಕಾಲಕ್ಕೆ ಉತ್ತರಾದಿ ಮಠದ ಸ್ವಾಮಿಗಳೂ ಅವರ ಕೂಡ ಅನೇಕ ಶಾಸ್ತ್ರಿಗಳೂ ಪಂಡಿತರೂ ಧಾರವಾಡಕ್ಕೆ ಬಂದಿದ್ದರು. ಆಗ ಚನ್ನಬಸವಪ್ಪನವರು ಕೆಳಗೆ ಕಾಣಿಸಿದ ವಿಷಯಗಳನ್ನು ವಾದಕ್ಕಾಗಿ ಇಟ್ಟು, ಒಂದು ಪ್ರಕಟನ ಪತ್ರಿಕೆಯನ್ನು ಪ್ರಸಿದ್ಧಿಸಿದರು. ಆ ವಿಷಯಗಳು ಯಾವವೆಂದರೆ:— (೧) ದೇವರ ಅಸ್ತಿತ್ವ (೨) ದೇವರ ನಾಸ್ತಿತ್ವ (೩) ಇಂದ್ರಿಯಗಳಲ್ಲಿ ಯಥಾರ್ಥ ಜ್ಞಾನವಿಲ್ಲ. ಈ ವಿಷಯಗಳನ್ನಿಟ್ಟು ಇವುಗಳಲ್ಲಿ ಬೇಕಾದವರು ಬೇಕಾದ ವಿಷಯಗಳನ್ನು ಆರಿಸಿಕೊಂಡು, ಅವುಗಳ ಬಗ್ಗೆ ತಮ್ಮ ಗೂಡವೇ ವಾದ ಮಾಡಿ ಯಾರು ಅವುಗಳನ್ನು ಸಿದ್ದಪಡಿಸುವರೋ ಅವರಿಗೆ ೨೦೦ ರೂಪಾಯಿಗಳ ಬಹುಮಾನವನ್ನು ಕೊಡುವೆವೆಂಬದಾಗಿ ಪಟ್ಟಣದಲ್ಲಿ ಸಾರಿದರು. ನಿಯಮಿತ ವೇಳೆಗೆ ಚನ್ನಬಸವಪ್ಪನವರು ವಿಠೋಬಾ ದೇವರ ಗುಡಿಯಲ್ಲಿ ವಾದಕ್ಕೆ ಸಿದ್ಧರಾಗಿ ಕುಳಿತರು. ಆದರೆ ಈ ವಿಷಯಗಳಲ್ಲಿ ಯಾವುದನ್ನೂ ತೆಗೆದುಕೊಂಡು ಒಬ್ಬ ವಿದ್ವಾಂಸನಾದರೂ ಅವರ ಕೂಡ ವಾದ ಮಾಡಲಿಕ್ಕೆ ಮುಂದುವರಿಯಲಿಲ್ಲ! ಈ ಮೇರೆಗೆ ಚನಬಸವಪ್ಪನವರು ತಮ್ಮ ಅಭಿಪ್ರಾಯಗಳನ್ನೂ ವಿಚಾರಗಳನ್ನೂ ಪ್ರಕಟ ಮಾಡಲಿಕ್ಕೆ ಯಾವಾಗಲೂ ತತ್ಪರರಾಗಿರುತ್ತಿದ್ದರು. ಇದಲ್ಲದೆ ಈ ಮೇಲಿನ ಸಂಗತಿಯಿಂದ ಅವರ ವಿದ್ವತ್ತೆಯೂ ವಾದ ಚತುರತೆಯೂ ಅವರ ಸಮಕಾಲೀನದಲ್ಲಿ ಜನರಿಗೆ ಎಷ್ಟು ಚನ್ನಾಗಿ ವಿದಿತವಾಗಿದ್ದವೆಂಬದು ತಿಳಿದು ಬರುತ್ತಿದೆ.

ಈ ಮೇರೆಗೆ ಚನ್ನಬಸಪ್ಪನವರ ವಿಚಾರಗಳಿದ್ದದರಿಂದ ಅವರು ವೇದಗಳು, ಬಾಯಬಲ್ಲ, ಕುರಾನ ಮೊದಲಾದ ಗ್ರಂಥಗಳು ದೇವಪ್ರಣೀತವಾದವುಗಳೆಂದು ತಿಳಿಯುತ್ತಿದ್ದಿಲ್ಲ. ಅವು ಮನುಷ್ಯರಿಂದಲೇ ಆದವೆಂದು ಅವರು ಯಾವಾಗಲೂ ಪ್ರತಿಪಾದಿಸುವರು. ಒಂದು ಸಾರೆ ಧಾರವಾಡದಲ್ಲಿ ಪ್ರಸಿದ್ಧ ಪಾದ್ರಿಗಳಾದ ಜಿಗಲರ ಧೊರೆಗಳ ಬಂಗಲೆಯಲ್ಲಿ ಮುಸ



ಲ್ಮಾನರ ಮತ್ತು ಕ್ರಿಶ್ಚನ್ನರ ಒಂದು ದೊಡ್ಡ ಸಭೆಯು ನೆರೆದಿತ್ತು. ಆಗ ಚನ್ನಬಸವಪ್ಪನವರು ನೆರೆದ ಜನರಿಗೆ ಅಂದದ್ದೇನಂದರೆ — "ಕುರಾನವು ದೇವರಿಂದ ಆದುದೆಂದು ನನಗೆ ಮುಸಲ್ಮಾನರು ಸಿದ್ಧಮಾಡಿ ಕೊಟ್ಟರೆ ನಾನು ಮುಸಲ್ಮಾನನಾಗುವೆನು. ಕ್ರಿಶ್ಚನ್ನರು ತನ್ನ ಬಾಯಬಲವು ದೇವರಿಂದ ಪ್ರಣೀತವಾದುದೆಂದು ಸಿದ್ಧಪಡಿಸಿದರೆ, ನಾನು ಕಿಶ್ಚನ್ನನಾಗುವೆನು" ಎಂದು ಆಹ್ವಾನಿಸಿದರು. ಆದರೆ ಯಾರೂ ಅವರ ಕೂಡ ವಾದಕ್ಕೆ ನಿಲ್ಲಲಿಲ್ಲ. ಒಂದು ಸಾರೆ, ಒಬ್ಬರು ಅವರಿಗೆ ಪೃಥ್ವಿಯಲ್ಲಿಯ ಧರ್ಮಗಳಲ್ಲಿ ಯಾವದು ಸತ್ಯವಾದುದೆಂದು ಕೇಳಲು, ಅವರು ಪ್ರತ್ಯುತ್ತರವಾಗಿ, ಅವೆಲ್ಲವೂ ಸಣ್ಣ ದೊಡ್ಡ ತೂತುಗಳುಳ್ಳ ಡೋಣಿಗಳಂತೆ ಇವೆ ಎಂದು ನುಡಿದರು. ಒಟ್ಟಿಗೆ ಚನ್ನಬಸವಪ್ಪನವರು ಯಾವ ವಿಷಯವನ್ನು ತೆಗೆದುಕೊಂಡರೂ ಅದರಲ್ಲಿ ತಮಗೆ ಸಟಿ ಕಂಡದ್ದನ್ನು ಸಟಿ ಎಂತಲೂ ದಿಟ ಕಂಡದ್ದನ್ನು ದಿಟವೆಂತಲೂ ನುಡಿಯುತ್ತಿದ್ದರು.

ಚನ್ನಬಸವಪ್ಪನರ ಈ ತರದ ವರ್ತನದಿಂದ ಅವರಿದ್ದ ಕಾಲಕ್ಕೆ ಧಾರವಾಡ ಪಟ್ಟಣದಲ್ಲಿ ಧಾರ್ಮಿಕ ವಿಷಯಗಳ ಬಗ್ಗೆ ಚರ್ಚೆಮಾಡುವ ಸ್ಫೂರ್ತಿಯು ಬಹಳ ಉಂಟಾಗಿತ್ತು. ಕೆಲವು ವರ್ಷಗಳಂತೂ ಓಣಿ ಓಣಿಗಳಲ್ಲಿಯೂ ಮನೆ ಮನೆಗಳಲ್ಲಿಯೂ ಜನರು ಕೂಡಿದಲ್ಲಿಯೂ ಧರ್ಮಚರ್ಚೆಗಳೂ ವಾಗ್ವಾದಗಳೂ ನಡೆಯುತ್ತಿದ್ದವು. ಆದರೆ ಚನ್ನಬಸವಪ್ಪನವರು ತಮ್ಮ ಪೂರ್ವವಯಸ್ಸಿನಲ್ಲಿಯೇ ಅಂದರೆ ೪೭ ವರ್ಷದವರಿರುವಾಗಲೇ ತೀರಿಕೊಂಡರು. ಅವರು ತಮ್ಮ ವಿಚಾರಗಳ ಬಗ್ಗೆ ಯಾವ ಗ್ರಂಥವನ್ನೂ ಬರೆದಿಡಲಿಲ್ಲ. ಆದ್ದರಿಂದ ಅವರ ಕಾಲಕ್ಕೆ ಹಬ್ಬಿದ ಈ ತರದ ಧಾರ್ಮಿಕ ವಿಷಯಗಳ ಬಹಿರಂಗ ಚರ್ಚೆಗಳು ಹಿಂದುಗಡೆ ಅಷ್ಟಕ್ಕೇ ನಿಂತುಹೋದವು.

ಈ ವಿಧವಾಗಿ ಚನ್ನಬಸವಪ್ಪನವರ ಧಾರ್ಮಿಕ ವಿಚಾರಗಳಿದ್ದರೂ ಅವರು ಸಾಮಾಜಿಕ ಬಂಧನಗಳನ್ನೂ ನೈತಿಕ ಕಟ್ಟುಗಳನ್ನೂ ಉಲ್ಲಂಘಿಸಬೇಕೆಂದು ಎಂದೂ ಇಚ್ಛಿಸಲಿಲ್ಲ. ಚನ್ನಬಸವಪ್ಪನವರು ಜನ್ಮತಃ ಲಿಂಗಾಯತರಿದ್ದರು. ಆದರೆ ಅವರು ತಮ್ಮ ಲಿಂಗಾಯತ ಸಮಾಜವನ್ನು ಎಂದೂ ಬಿಡಲಿಲ್ಲ. ಒಂದು ಸಾರೆ ಹುಬ್ಬಳ್ಳಿಯ ಹತ್ತರವಿರುವ ಉಣಕಲ್ಲ ಎಂಬ ಗ್ರಾಮದಲ್ಲಿ ಬಹು ಜನರು ಕ್ರಿಸ್ತೀಮತವನ್ನು ಸೇರಲಿಕ್ಕೆ ಸಿದ್ಧರಾದುದನ್ನು ಕೇಳಿ ಅವರು ಅಲ್ಲಿಗೆ ಹೋಗಿ ಅವರ ಮನಸ್ಸನ್ನು ತಿರುಗಿಸಿದರು. ಅದೇ ಮೇರೆಗೆ ಅವರು ಹೋದ ಹೋದಲ್ಲಿ ನೀತಿಯ ಬೋಧೆಯನ್ನು ಮಾಡದೆ

ಬಿಡುತ್ತಿದ್ದಿಲ್ಲ. ಅವರಲ್ಲಿ ಪ್ರಸಂಗಕ್ಕೆ ಸರಿಯಾಗಿ ಮಾತನಾಡುವ ಜಾಣ್ಮೆ
ಯು ಮಿಗಿಲಾದದ್ದಿತ್ತು. ಅದರಿಂದ ಅವರ ಮಾತುಗಳು ಜನರಲ್ಲಿ ಬಹಳ
ಪರಿಣಾಮಕರವಾದವುಗಳಾಗುತ್ತಿದ್ದವು. ಒಂದು ದಿನ ಅವರು ತಮ್ಮ
ಮನೆಯ ಕಟ್ಟೆಯ ಮೇಲೆ ಕುಳಿತಾಗ, ಇಬ್ಬರು ಹೆಂಗಸರು ಜಗಳಾಡಿ
ಬಾಯಿಗೆ ಬಂದಂತೆ ಬಯ್ಯುವವನ್ನು ಕೇಳಿದರು. ಆಗ ಅವರು ಅವರಿಬ್ಬ
ರನ್ನು ತಮ್ಮ ಹತ್ತರ ಕರೆದು, ಒಬ್ಬಳಿಗೆ "ಅವ್ವಾ, ನೀನು ಎಲ್ಲ ಬೈಗಳಲ್ಲಿ
ಹೆಚ್ಚಿನದಾವದ್ದೊಂದು ಬೈಗುಳನ್ನು ಆಕೆಗೆ ಬೈ" ಎಂದು ಮತ್ತೊಬ್ಬಳಿಗೆ
"ಆಕೆಯು ನಿನಗೆ ಬೈದದ್ದಕ್ಕಿಂತ ಹೆಚ್ಚಿನ ಬೈಗುಳಿದ್ದರೆ ಬೈ; ಇಲ್ಲದಿದ್ದರೆ
ಬೇಡ. ಅಥವಾ ನಿನೇ ಮೊದಲು ಎಲ್ಲ ಬೈಗುಳಲ್ಲಿ ಹೆಚ್ಚಿನದೊಂದು ಬೈಗು
ಳನ್ನು ಆಕೆಗೆ ಬೈ. ಆ ಮೇಲೆ ನಿನ್ನದಕ್ಕಿಂತ ಹೆಚ್ಚಿನ ಬೈಗುಳು ಸಿಕ್ಕರೆ
ಆಕೆಯು ನಿನಗೆ ಬಯ್ಯುವಳು; ಇಲ್ಲದಿದ್ದರೆ ಇಲ್ಲ" ಎಂದು ಹೇಳಲಾಗಿ
ಅವರಿಗೆ ಏನೊಂದು ತೋಚದೆ ಲಜ್ಜಿತರಾಗಿ ಜಗಳಾಡುವದನ್ನು ಬಿಟ್ಟು
ಹೋದರು. ಈ ತರದ ವರ್ತನೆಯಿಂದ ಚನ್ನಬಸವಪ್ಪನವರು ಅಜ್ಞಾನಿಗ
ಳಾದ ಸಜ್ಜನರನ್ನು ಸುಧಾರಿಸಲಿಕ್ಕೆ ಯಾವಾಗಲೂ ಪ್ರಯತ್ನಿಸುತ್ತಿದ್ದರು.

ಜನ ಸುಧಾರಣೆಯನ್ನು ಮಾಡುವ ಅವರ ಈ ತರದ ಪ್ರಯತ್ನಗ
ಳಲ್ಲಿ ಅವರ ವಕ್ತೃತ್ವ ಶಕ್ತಿಯು ಅವರಿಗೆ ಒಳಿತಾಗಿ ಸಹಾಯ ಮಾಡು
ತ್ತಿತ್ತು. ಅವರು ಸಭೆಗಳಲ್ಲಿ ಚನ್ನಾಗಿ ಭಾಷಣಮಾಡುವ ಶಕ್ತಿಯನ್ನು
ಅವರು ಪುಣೆಯಲ್ಲಿದ್ದಾಗಲೇ ಪಡೆದುಕೊಂಡಿದ್ದರು. ಗಂಟೆಯ ನಾದ
ದಂತಿದ್ದ ಅವರ ಉಚ್ಚಧ್ವನಿ, ಎತ್ತರವಾದ ಮತ್ತು ಬಲವುಳ್ಳ ಅವರ
ಮೈಕಟ್ಟು ತೇಜಃಪುಂಜವಾದ ಮುಖಮುದ್ರೆ ಮಾರ್ಮಿಕ ನುಡಿಗಳು ಸಭಿ
ಕರನ್ನು ಕೂಡಲೇ ವಶಮಾಡಿಕೊಳ್ಳುತ್ತಿದ್ದವು. ಅವರು ಮಾತನಾಡುವ
ಭಾಷಾಶೈಲಿಯು ಬಹು ಬಿರಸಾದದ್ದು. ಆದರೂ ಅವರ ಶಬ್ದಗಳಲ್ಲಿ
ಬಹಳ ಮಾರ್ಮಿಕತೆಯೂ ಬಲವೂ ಇರುತ್ತಿದ್ದವು. ಎಷ್ಟು ಗಹನ ವಿಷ
ಯಗಳಿದ್ದರೂ. ಅವುಗಳಿಗೆ ಸಮಯೋಚಿತ ಮತ್ತು ವ್ಯವಹಾರಿಕ ಉದಾ
ಹರಣೆಗಳನ್ನು ಕೊಟ್ಟು, ಅವು ಕೇಳುವವರ ಮನಸ್ಸಿನಲ್ಲಿ ಬಿಂಬಿಸುವಂತೆ
ಭಾಷಣ ಮಾಡುತ್ತಿದ್ದರು. ಆದ್ದರಿಂದ ಪ್ರೇಕ್ಷಕರು ಅವರ ಭಾಷಣ ಕೇಳ
ಲಿಕ್ಕೆ ಎಂದೂ ಬೇಸರಿಯುತ್ತಿದ್ದಿಲ್ಲ. ಇದರಂತೆಯೇ ಅವರು ವಾದದಲ್ಲಿ
ಬಹು ತೀಕ್ಷ್ಣ ಬುದ್ಧಿಯುಳ್ಳವರಾರಿದ್ದರು. ಅವರು ಶಾಸ್ತ್ರೀಯ ವಿಷಯ
ಗಳನ್ನೂ ತರ್ಕಶಾಸ್ತ್ರವನ್ನೂ ಚನ್ನಾಗಿ ಬಲ್ಲವರಾಗಿದ್ದರಿಂದ ವಿಷಯದಲ್ಲಿಯ



ನ್ಯೂನತೆಯನ್ನು ಒಮ್ಮೆಲೆ ಕಂಡು ಹಿಡಿದು, ಅವುಗಳನ್ನು ಸ್ಫುಟವಾಗಿ
ತೋರಗೆಡವಲಿಕ್ಕೆ ಸಮರ್ಥರಾಗುತ್ತಿದ್ದರು. ಆದ್ದರಿಂದ ಅವರ ಗೂಡ
ವಾದಿಸಲಿಕ್ಕೆ ಯಾರೂ ಧೈರ್ಯಮಾಡುತ್ತಿದ್ದಿಲ್ಲ.

ಈ ಮೇರೆಗೆ ಚನ್ನಬಸವಪ್ಪನವರು ತಮ್ಮ ಕುಶಾಗ್ರ ಬುದ್ಧಿ, ವಿದ್ವತ್ತೆ,
ವಕ್ತೃತ್ವ, ವಾದಚತುರತೆ ಮುಂತಾದ ಗುಣಗಳ ಉಪಯೋಗವನ್ನು
ಸ್ವಜನರಲ್ಲಿ ವಿದ್ಯಾಪ್ರೋತ್ಸಾಹನೆ ನೈತಿಕವೃತ್ತಿ ಸದ್ವಿಚಾರಗಳನ್ನು ಹುಟ್ಟಿ
ಸುವದರಲ್ಲಿ ಉಪಯೋಗಿಸುತ್ತಿದ್ದರು. ಅವರು ತಮ್ಮ ಫಿರ್ತಿಯಲ್ಲಿ ಹಳ್ಳಿ
ಗಳಿಗೆ ಹೋದಾಗ್ಗೆ ಸಹ ಜನರನ್ನು ತಮ್ಮ ಸುತ್ತಲು ನೆರಿಸಿಕೊಂಡು,
ಅವರಿಗೆ ನಾನಾವಿಷಯಗಳ ಬಗ್ಗೆ ಬೋಧೆಮಾಡುತ್ತಿದ್ದರು. ಆದ್ದರಿಂದ
ಅವರ ವರ್ಚಸ್ಸು ಜನಸಮುದಾಯದಲ್ಲಿ ಅತ್ಯಂತವಾಗಿ ಬೆಳೆದಿತ್ತು.
ದುಷ್ಟರೂ ದುರ್ಗುಣಿಗಳೂ ಅವರ ಸಮೀಪಕ್ಕೆ ಸಹ ಹೋಗುತ್ತಿದ್ದಿಲ್ಲ.
ಅವರು ಸಮೀಪಕ್ಕೆ ಹೋದರೆ, ಅವರ ದುರ್ಗುಣಗಳನ್ನು ಚನ್ನಬಸವಪ್ಪ
ನವರು ತಮ್ಮ ಸ್ವಾಭಾವಿಕ ತೀಕ್ಷ್ಣ ಶಬ್ದಗಳಿಂದ ಜರಿಯದೆ ಬಿಡುತ್ತಿ
ದ್ದಿಲ್ಲ. ಒಬ್ಬ ಸ್ವಾಮಿಗಳು ಚನ್ನಬಸವಪ್ಪನವರನ್ನು ಕಾಣಲಿಕ್ಕೆ ಹೋದಾಗ್ಗೆ
ಅವರು "ಸಕ್ಕರೀಕರಣಿಯು ಪಾಯಖಾನೆಯಲ್ಲಿ ಬಿತ್ತು" ಎಂದು ಅಂದು
ಬಿಟ್ಟರು. ಧರ್ಮಗುರುಗಳ ಮೇಲೆ ಚನ್ನಬಸವಪ್ಪನವರ ಕಟಾಕ್ಷವು ಬಹಳ
ವಿತ್ತು. ಚನ್ನಬಸವಪ್ಪನವರು ಯಾವದೊಂದು ಊರಿಗೆ ಹೋದ ಕೂಡಲೇ,
ಅಲ್ಲಿಯ ಮಠದ ಅಯ್ಯನವರು ಆ ಊರು ಬಿಟ್ಟೇ ಹೋಗುತ್ತಿದ್ದರು. ಈ
ಮೇರೆಗೆ ಚನ್ನಬಸವಪ್ಪನವರ ದರ್ಪವು ಜನರಲ್ಲಿ ಅತ್ಯಂತ ವಿಲಕ್ಷಣವಾ
ಗಿತ್ತು. ಈ ಕಾರಣದಿಂದ ಆಗಿನ ಜನರು ಅವರಿಗೆ "ಹುಲಿ ಚನಬಸಪ್ಪ'
ಎಂದು ಕರೆಯುತ್ತಿದ್ದರು. ಚನ್ನಬಸವಪ್ಪನವರು ಸಾಧಾರಣ ಒಬ್ಬ ಶಾಲೆ
ಯ ಇನ್‌ಸ್ಪೆಕ್ಟರರು. ಅವರಿಗೆ ದೇಹದಂಡನೆಯ ಯಾವ ಅಧಿಕಾರವೂ
ಇರಲಿಲ್ಲ. ಆದರೆ ಯಾವನು ಮನುಷ್ಯರಲ್ಲಿಯ ಶ್ರೇಷ್ಠ ಮನೋವೃತ್ತಿಗ
ಳಿಗೆ ಉತ್ತೇಜನಕೊಟ್ಟು, ಅವರಲ್ಲಿ ಸದಸದ್ವಿಚಾರ-ವಿವೇಕ-ಸ್ವಾಭಿಮಾನ
ಗಳನ್ನು ಹುಟ್ಟಿಸಿ, ಅವುಗಳ ಬಲದಿಂದ, ಅವರನ್ನು ತನ್ನ ಕಡೆಗೆ ಸೆಳೆದು
ಕೊಳ್ಳಲು ಸಮರ್ಥನಾಗುವನೇ ಅವನು ಬಡವನಿರಲಿ ಬಲ್ಲದನಿರಲಿ,
ಉಚ್ಚನಿರಲಿ ನೀಚನಿರಲಿ, ಅವನ ಅಧಿಕಾರವು ಜನ ಸಮಾಜದ ಮೇಲೆ
ಶಾಶ್ವತವಾಗಿ ಉಳಿಯುವದು. ಮತ್ತು ಇಂಥವನೇ ಸಮಾಜ ಚಾಲಕ

ನಾಗಿ ದೇಶೋದ್ಧಾರಕನಾಗುವನು. ಇಂಥವರ ವರ್ಗದಲ್ಲಿ ಚನ್ನಬಸವಪ್ಪನವರನ್ನು ನಾವು ಎಣಿಸಬಹುದಾಗಿದೆ.

ಈ ವರೆಗೆ ನಾವು ಚನ್ನಬಸವಪ್ಪನವರು ಕರ್ನಾಟಕ ದೇಶಕ್ಕೆ ಮಾಡಿದ ಕಾರ್ಯಗಳನ್ನು ವಿವರಿಸಿದೆವು. ಇನ್ನು ಮೇಲೆ ಅವರು ತಾವು ಹುಟ್ಟಿದ ಲಿಂಗಾಯತ ಸಮಾಜಕ್ಕೋಸ್ಕರ ಯಾವ ಯಾವ ಸುಧಾರಣೆಯ ಪ್ರಯತ್ನಗಳನ್ನು ಮಾಡಿದರೆಂಬುದನ್ನು ವಿವರಿಸುವೆವು. ವಾಚಕರು ಬೇಕಾದ ಜಾತಿಯವರಿದ್ದರೂ ಕೂಡ ಅವರು ಚನ್ನಬಸವಪ್ಪನವರ ಪ್ರಯತ್ನಗಳಲ್ಲಿ ಬೋಧ ತೆಗೆದುಕೊಳ್ಳತಕ್ಕಂಥ ಅನೇಕ ಸಂಗತಿಗಳು ಇರುತ್ತವೆ.

ಈಗಿನ ಕಾಲಕ್ಕೆ ಜಾತಿಗಳು ನಮ್ಮ ಹಿಂದೂ ಸಮಾಜಕ್ಕೆ ಮುಖ್ಯಾಂಗಗಳಾಗಿ ಉಳಿದಿವೆ. ಇಂಥ ವಿಲಕ್ಷಣ ಸ್ಥಿತಿಯು ಅನೇಕ ಐತಿಹಾಸಿಕ ಕಾರಣಗಳಿಂದಲೂ ಅನೇಕ ಸಾಮಾಜಿಕ ಧಾರ್ಮಿಕ ಕೃತ್ರಿಮ ನಿರ್ಬಂಧನೆಗಳಿಂದಲೂ ಇದಕ್ಕೆ ಉಂಟಾಗಿದೆ. ಅದು ಕಾರಣ ಈ ಕಾಲಕ್ಕೆ ಹಿಂದೂ ಸಮಾಜದ ಪ್ರಯತ್ನಗಳು ಆಯಾ ಜಾತಿಗಳು ಮತ್ತು ಒಟ್ಟುದೇಶ ಇವುಗಳಲ್ಲಿಯ ಪರಸ್ಪರ ಸಂಬಂಧವನ್ನರಿತುಕೊಂಡು ಇವೆರಡನ್ನೂ ಸಮ್ಮೇಳನ ಪಡಿಸಿ, ಸಮವಾಗಿ ಪ್ರಯತ್ನಿಸುವದು ಅವಶ್ಯವದೆ. ಚನ್ನಬಸವಪ್ಪನವರು ಉದಾರಬುದ್ಧಿಯವರಾದ್ದರಿಂದ ಅವರು ಇದನ್ನರಿತು ವರ್ತಿಸುವವರಾಗಿದ್ದರು. ಅವರ ಮನಸ್ಸಿನಲ್ಲಿ ಸ್ವಸಮಾಜದ ಬಗ್ಗೆ ಉಜ್ವಲ ಪ್ರೀತಿಯು ಸದಾ ತುಂಬಿ ತುಳುಕುತ್ತಿತ್ತು. ಅದರಂತೆಯೇ ಅವರಲ್ಲಿ ತಮ್ಮ ಕನ್ನಡ ನಾಡಿನ ಮತ್ತು ವಿದ್ಯೆಯ ಬಗ್ಗೆ ಅತುಲವಾದ ಪ್ರೀತಿಯು ವಾಸಿಸುತ್ತಿತ್ತು. ಆದರೆ ಅವರು ಈ ಎರಡೂ ವಿಷಯಗಳಲ್ಲಿ ಏನೊಂದು ಪರಸ್ಪರ ವಿರೋಧವನ್ನುಂಟು ಮಾಡದೆ, ನಿಷ್ಪಕ್ಷಪಾತದಿಂದಲೂ ನಿಷ್ಕಪಟತೆಯಿಂದಲೂ ವರ್ತಿಸುವವರಾಗಿದ್ದರು. ಆದ್ದರಿಂದಲೇ ಅವರು ತಮ್ಮ ಸಮಾಜದವರಿಗೂ ನಾಡಿನವರಿಗೂ ಸರಿಯಾಗಿ ವಂದ್ಯರಾದರು

ಕರ್ನಾಟಕದಲ್ಲಿ ಲಿಂಗಾಯತರ ಸಮಾಜವು ಬಹು ದೊಡ್ಡದಾಗಿದೆ. ಈ ಸಮಾಜವು ಘಾತುಕವಾದ ಜಾತಿಭೇದವನ್ನು ಮುರಿದೊತ್ತಿ ಸರ್ವರೂ ಸಮಾನರೆಂಬ ಭಾವನೆಯನ್ನು ಜನರಲ್ಲಿ ಹಬ್ಬಿಸಿ, ಸಮಾಜದಲ್ಲಿ ನಿರಂತರ ಧರ್ಮಬೋಧೆ ಮಾಡಲೂ ವಿದ್ಯಾದಾನ ಮಾಡಲೂ ಗ್ರಾಮಾಂತರಗಳಲ್ಲಿ ಮಠಗಳನ್ನು ಸ್ಥಾಪಿಸಿ, ಒಂದು ಕಾಲಕ್ಕೆ ಕರ್ನಾಟಕದಲ್ಲಿ ಮಹತ್ತರವಾದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯ ಕಾರ್ಯಗಳನ್ನು



ಮಾಡಿದ್ದಾಗಿರುತ್ತದೆ. ಆದರೆ ಈ ಸಮಾಜದಲ್ಲಿ ಸಾಂಪ್ರತ ಕಾಲದ ಹೊಸ ಪರಿಸ್ಥಿತಿಗನುಸರಿಸಿ ಸುಧಾರಣೆಯ ಬೀಜಗಳನ್ನು ಮೊದಲು ಬಿತ್ತಿದವರು ಚನ್ನಬಸವಪ್ಪನವರೇ ಇದ್ದಾರೆ. ಅವರೇ ಈ ಸಮಾಜದಲ್ಲಿ ಪ್ರಾಥಮಿಕ ಮತ್ತು ಇಂಗ್ಲೇಯ ಶಿಕ್ಷಣವನ್ನು ಪ್ರಸಾರಗೋಳಿಸಲು ಬಹಳ ಪ್ರಯತ್ನಿಸಿ ಅವರ ಅಭಿವೃದ್ಧಿಗೆ ಕಾರಣರಾದರು.

ಚನ್ನಬಸವಪ್ಪನವರ ನಿರಂತರ ಪ್ರಯತ್ನಗಳಿಂದ ಹಳ್ಳಿ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಡಹತ್ತಿದ ಹಾಗೆ ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆಯಾದರೂ ಭರದಿಂದ ಶಾಲೆಗಳಲ್ಲಿ ತಾನಾಗಿಯೇ ಬೆಳೆಯುತ್ತ ನಡೆಯಿತು. ಅದು ಕೆಳಗೆ ಕಾಣಿಸಿದ ಅಂಕಿಗಳಿಂದ ತಿಳಿದುಬರುವಂತೆ ಇದೆ. ಇವು ೧೮೮೨-೮೩ನೇ ವರ್ಷದವಿದ್ದು ಲಿಂಗಾಯತ ಹುಡುಗರ ಸಂಖ್ಯೆಯೊಂದಿಗೆ ಬ್ರಾಹ್ಮಣ ಹುಡುಗರ ಸಂಖ್ಯೆಯನ್ನೂ ತುಲನೆಗಾಗಿ ಕೊಟ್ಟಿರುತ್ತೇವೆ.

| ಸಂಖ್ಯೆ | ಜಿಲ್ಹೆಗಳು. | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ. | ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆ. | ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆ. |
|---|---|---|---|---|
| ೧ | ಧಾರವಾಡ | ೨೯,೭೧೧ | ೧೩,೮೫೮ | ೩೪೩೫ |
| ೨ | ಬೆಳಗಾವ | ೧೦,೧೮೧ | ೫೨೩೪ | ೨೭೧೯ |
| ೩ | ವಿಜಾಪುರ | ೧೫,೮೬೮ | ೩೩೩೬ | ೨೦೬೧ |

ಈ ಸಂಖ್ಯೆಗಳನ್ನು ನೋಡಿದರೆ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಶಿಕ್ಷಣವು ಲಿಂಗಾಯತ ಸಮಾಜದಲ್ಲಿ ಆ ಕಾಲಕ್ಕೆ ಚನ್ನಾಗಿ ಬೆಳೆಯಿತೆಂದು ಕಂಡು ಬರುತ್ತದೆ. ಇದು ಚನ್ನಬಸವಪ್ಪನವರು ಪ್ರಾಥಮಿಕ ಶಿಕ್ಷಣವನ್ನು ಹೆಚ್ಚಿಸಿದ್ದರ ಪರಿಣಾಮವಾಗಿರುತ್ತದೆ. ಆದರೆ ಚನ್ನಬಸವಪ್ಪನವರು ಪಾಶ್ಚಿಮಾತ್ಯ ಶಿಕ್ಷಣದ ಲಾಭವನ್ನು ಪಡೆದವರಾಗಿದ್ದರು. ಆದ್ದರಿಂದ ಅವರು ತಮ್ಮ ಸಮಾಜದಲ್ಲಿ ಅದನ್ನು ಬೆಳಿಸಬೇಕೆಂಬ ಅತ್ಯುತ್ಕಟ ಇಚ್ಛೆಯುಳ್ಳವರಾಗಿದ್ದರು. ಆ ಕಾಲಕ್ಕೆ ಸರಕಾರೀ ಹೈಸ್ಕೂಲುಗಳೂ ಮಿಶನ್ ಸ್ಕೂಲುಗಳೂ ಜಿಲ್ಹಾ ಸ್ಥಳಗಳಲ್ಲಿ ಸ್ಥಾಪಿಸಲ್ಪಡಹತ್ತಿದವು. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಲಿಂಗಾಯತರ ಸಂಖ್ಯೆಯು ಹೆಚ್ಚಿದ್ದರೂ ಅವರ ಸಂಖ್ಯೆ

ಯು ಇಂಗ್ಲಿಷ್ ಶಾಲೆಗಳಲ್ಲಿ ಅತ್ಯಲ್ಪವಾಗಿದ್ದಿತು. ಈ ಸ್ಥಿತಿಯು ಅಹಿತಕಾರಕವೆಂದು ಚನ್ನಬಸವಪ್ಪನವರಿಗೆ ತೋರಿದ್ದರಿಂದ, ಅವರು ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವಿದ್ಯಾಭ್ಯಾಸಕ್ಕೋಸ್ಕರ ಬಹಳ ಪ್ರೋತ್ಸಾಹಿಸುತ್ತಿದ್ದರು. ಆ ಕಾಲದಲ್ಲಿ ಕೆಳಗೆ ಕಾಣಿಸಿದ ಸಂಗತಿಗಳು ವರ್ತಿಸಿದವು.

ಮೈಸೂರ ಸಂಸ್ಥಾನ ಚಿತ್ರಕಲ್ಲದುರ್ಗದಲ್ಲಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘಾರಾಜೇಂದ್ರ ಮಹಾ ಸ್ವಾಮಿಗಳವರ ಬ್ರಹನ್ಮಠ ವಿರುತ್ತದಷ್ಟೇ. ಈಪೀಠದಮೇಲೆ ಚನ್ನಬಸಪ್ಪನವರ ಕಾಲದಲ್ಲಿ ಶ್ರೀ ಮಹಾಲಿಂಗಸ್ವಾಮಿಗಳವರು ಆರೂಢರಾಗಿದ್ದರು. ಅವರು ಈ ಕಾಲಕ್ಕೆ ದೇಶದಲ್ಲಿ ಸಂಚಾರಕ್ಕೆ ಹೊರಟರು. ಪೂರ್ವದಲ್ಲಿ ಈ ಪೀಠಾಧಿಪತಿಗಳೆಲ್ಲಾರೂ ಬಹು ದಿವಸ ಸಂಚಾರಕ್ಕೆ ಹೊರಟರಲಿಲ್ಲ. ಆದ್ದರಿಂದ ಶ್ರೀ ಮಹಾಸ್ವಾಮಿಗಳವರು ಸಂಚಾರಕ್ಕೆ ಹೊರಟಕೂಡಲೆ ಅವರು ಹೋದಹೋದಲ್ಲಿ ಬಹು ಸಂಭ್ರಮದಿಂದ ಉತ್ಸವಗಳು ನಡೆಯಲಾರಂಭಿಸಿದವು. ಮಹಾಲಿಂಗ ಸ್ವಾಮಿಗಳಾದರೂ ಸ್ವಾಭಾವಿಕವಾಗಿ ಬಹು ಉದಾರಿಗಳೂ ಅಂತಃಕರುಣಿಗಳೂ ಆಗಿದ್ದರು. ಅವರು ತಮ್ಮ ದರ್ಶನಕ್ಕೆ ಬಂದ ಜನರಿಗೆಲ್ಲ ಏನೊಂದು ಭೇದಭಾವವನ್ನೆಣಿಸದೆ ಬೆಲೆಯುಳ್ಳ ಉಡುಗರೆಗಳನ್ನೂ ಬಡವರಿಗೆ ದಾನಧರ್ಮಗಳನ್ನೂ ಧಾರಳವಾಗಿ ಕೊಡುತ್ತಿದ್ದರು. ಅದ್ದರಿಂದ ಅವರು ಎಲ್ಲರಿಗೂ ಬಹಳ ಪ್ರೀಯರಾದರು. ಲಿಂಗಾಯತ ಸಮಾಜದವರಾದರೂ ಅವರಿಗೆ ಮೆಚ್ಚಿದವರಾಗಿ ಅವರನ್ನು ಬಹು ವೈಭವದಿಂದ ಕಂಡುಕೊಂಡು, ಉದಾರ ಕಾಣಿಕೆಗಳನ್ನು ಕೊಡುತ್ತಿದ್ದರು. ಸ್ವಾಮಿಗಳಾದರೂ ಅವುಗಳನ್ನು ಸಂಗ್ರಹಿಸಲಿಕ್ಕೆ ಇಚ್ಛಿಸದೆ, ದಾನ-ಧರ್ಮಗಳಲ್ಲಿಯೂ ಗಣಾರಾಧನೆಗಳಲ್ಲಿಯೂ ಅನ್ನಸಂತರ್ಪಣೆಗಳಲ್ಲಿಯೂ ವೆಚ್ಚಮಾಡಿ ಬಿಡುತ್ತಿದ್ದರು. ಈಮೇರೆಗೆ ಸ್ವಾಮಿಗಳವರ ಉತ್ಸವು ದೇಶದಲ್ಲಿ ಅಸದೃಶವಾಗಿ ನಡೆಯತೊಡಗಿತು.

ಈಪ್ರಕಾರ ದೇಶದಲ್ಲಿ ಮಹಾಸ್ವಾಮಿಗಳವರ ಸಂಚಾರವು ದುಂದುಗಾರಿಕೆಯಿಂದ ನಡೆದದ್ದು ಚೆನ್ನಬಸವಪ್ಪನವರ ವಿವೇಕಕ್ಕೆ ಮಾತ್ರ ಸರಿಬರಲಿಲ್ಲ. ಅವರು ಬಾಹ್ಯಾಡಂಬರವನ್ನು ಪ್ರೀತಿಸುತ್ತಿದ್ದಿಲ್ಲ. ಮತ್ತು ಅವರು ತಮ್ಮ ಸಮಾಜದ ಹಣವು ಹೀಗೆ ಅಸಿವಾರವಾಗಿ ವೆಚ್ಚವಾಗುವದನ್ನು ನೋಡಿ ಮನಸ್ಸಿನಲ್ಲಿ ವಿಷಾದಪಡುತ್ತಿದ್ದರು. ಅವರು ಒಂದು ಸಾರೆ



ಮಹಾಸ್ವಾಮಿಗಳವರ ದರ್ಶನಕ್ಕೆ ಹೋದಾಗ ಅವರಿಗೆ ಹೀಗೆ ನಿರರ್ಥಕವಾಗಿ ಹಣ ವೆಚ್ಚಮಾಡುವದು ನಿಷ್ಪ್ರಯೋಜಕವೆಂದು ಹೇಳಿದ್ದಲ್ಲದೆ, ಆಧುನಿಕ ಸುಧಾರಣೆ ಮತ್ತು ಇಂಗ್ಲಿಷ ಶಿಕ್ಷಣದ ಅವಶ್ಯಕತೆಯನ್ನು ಕುರಿತು ಅವರಿಗೆ ನಿರೂಪಿಸಿದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಮಹಾಸ್ವಾಮಿಗಳವರ ಬದಿಯಲ್ಲಿದ್ದವರು ಮಾತ್ರ ಚನ್ನಬಸವಪ್ಪನವರು ಮ್ಲೇಂಛ ಭಾಷೆಯನ್ನು ಲಿಂಗಾಯತರಿಗೆ ಕಲಿಸಿ, ಧರ್ಮವನ್ನು ಕೆಡಿಸಿ ಬಿಡುವ ಮನಸ್ಸಿನವರಿರುವರೆಂದು ಹೇಳಿ, ಅವರನ್ನು ಒಳಿತಾಗಿ ಹಳಿದರು.

ಮುಂದೆ ಮಹಾ ಸ್ವಾಮಿಗಳು ಶ್ರೀ ಉಳವಿಯ ಕ್ಷೇತ್ರದಲ್ಲಿ ಒಂದು ಬಹುದೊಡ್ಡ ಗಣಾರಾಧನೆಯನ್ನು ಮಾಡಿಸಿದರು. ಆ ಕಾಲಕ್ಕೆ ಆ ಸ್ಥಳದಲ್ಲಿ ಬಹುದೂರ ದೇಶದಿಂದ ಸಾವಿರಾರು ಜನರು ನೆರೆದರು. ಅಷ್ಟು ದೊಡ್ಡ ಜಾತ್ರೆಯೂ ವೈಭವವೂ ಅಲ್ಲಿ ಹಿಂದಕ್ಕೆ ಎಂದೂ ಆಗಿದ್ದಿಲ್ಲ. ಆ ವೈಭವವನ್ನು ನೋಡಿದವರು ಈಗಲೂ ಅದನ್ನು ಪರಪರಿಯಿಂದ ವರ್ಣಿಸುತ್ತಾರೆ. ಈ ಮೇರೆಗೆ ದೇಶದಲ್ಲೆಲ್ಲ ಎಲ್ಲಿ ನೋಡಿದರೂ, ಮಹಾಸ್ವಾಮಿಗಳ ಮಹತ್ವ, ಔದಾರ್ಯ, ವೈಭವ ಇವುಗಳ ವರ್ಣನೆಗಳೇ ನಡೆದಿದ್ದವು. ಆದರೆ ಈ ತರದ ವೈಭವಕ್ಕೆ ಮೆಚ್ಚದೆ ಮನಸ್ಸಿನಲ್ಲಿಯೇ ಉಮ್ಮಳಿಸುತ್ತಲಿದ್ದವರು ಚನ್ನಬಸವಪ್ಪನವರೊಬ್ಬರೇ ಆಗಿದ್ದರು. ಅವರು ಅನಿಯಂತ್ರಿತವಾಗಿ ಸಮಾಜದ ದುಡ್ಡು ಹೀಗೆ ಹಾಳಾಗಿ ಹೋಗುವದು ಅವರ ಮನಸ್ಸಿಗೆ ತುಸುವಾದರೂ ಬರಲಿಲ್ಲ. ಅವರು ಉಳವಿಯ ಸಮಾರಂಭಕ್ಕೆ ಸಹ ಹೋಗಲಿಲ್ಲ.

ಈ ಮೇರೆಗೆ ಚನ್ನಬಸವಪ್ಪನವರು ಉಳಿವಿಯ ಸಮಾರಂಭಕ್ಕೆ ಬಾರದ್ದು ಮಹಾಲಿಂಗಸ್ವಾಮಿಗಳ ಮನಸ್ಸಿಗೆ ಬಹಳೇ ಹತ್ತಿತು. ಆಗಿನ ಲಿಂಗಾಯತ ಸಮಾಜದಲ್ಲಿ ಇವರೊಬ್ಬರೇ ವಿದ್ಯಾವಂತರಾಗಿ ಸರಕಾರೀ ಶ್ರೇಷ್ಠ ಪದವಿಯಲ್ಲಿದ್ದದರಿಂದ ಇವರು ದೊಡ್ಡ ಮನುಷ್ಯರೆಂದೆಣಿಸಿಕೊಳ್ಳುತ್ತಿದ್ದರು. ಆದ್ದರಿಂದ ಮಹಾಸ್ವಾಮಿಗಳವರು ಅವರನ್ನುಆಗ್ರಹದಿಂದ ಉಳಿವಿಗೆ ಕರಿಸಿಕೊಂಡರು. ಚನ್ನಬಸಪ್ಪನವರು ಉಳಿವಿಗೆ ಹೋದಮೇಲೆ, ಅಲ್ಲಿ ದೊಡ್ಡದೊಂದು ಸಭೆಯು ನೆರೆಯಲು, ಆ ಸಭೆಯಲ್ಲಿಯೇ ಮಹಾಸ್ವಾಮಿಗಳ ಈ ತರದ ಆಡಂಬರಗಳನ್ನೂ ದುಂದು ವೆಚ್ಚವನ್ನೂ ನಿರಾಕರಿಸಿದರು. ಮತ್ತು ಅವರು ಸಾಂಪ್ರತ ಕಾಲಸ್ಥಿತಿಯನ್ನೂ ಶಿಕ್ಷಣ ಪ್ರಸಾರದ

ಅವಶ್ಯಕತೆಯನ್ನೂ ತಿಳಿಸಿ ಹೇಳಿ, ಕಡೆಯಲ್ಲಿ ಮಹಾಸ್ವಾಮಿಗಳವರು ಇಷ್ಟು
ದೊಡ್ಡ ಜನಸಮುದಾಯವನ್ನು ನೆರಿಸಿ, ಗಣಾರಾಧನೆಯನ್ನು ಮಾಡಿಸಿದ್ದರ ಉ
ಪಯೋಗವು ಉಳಿವಿಯ ಗುಡ್ಡವನ್ನು ಹೇಸಿಕೆ ಮಾಡಿದ್ದೊಂದೇ ಆಯಿತೇ
ಹೊರ್ತು ಬೇರೊಂದೇನೂ ಆಗಲಿಲ್ಲವೆಂದು ತಮ್ಮ ಸ್ವಾಭಾವಿಕ ಸ್ಪಷ್ಟೋಕ್ತಿ
ಗಳಿಂದ ಮಹಾಸ್ವಾಮಿಗಳಿಗೆ ಹೇಳಿದರು. ಆಗ ಮಹಾಸ್ವಾಮಿಗಳ
ವರ ಮನಸ್ಸು ಬದಲಾಯಿತು. ಅವರು ಚನ್ನಬಸವಪ್ಪನವರ ವಿಚಾರ
ಗಳಿಗೊಪ್ಪಿ ಅವುಗಳಂತೆ ನಡೆಯಲು ಸಿದ್ಧರಾದರು. ಆಗ ನ್ನಬಸವಪ್ಪನವರು
ಬೆಳಗಾವಿಯಲ್ಲಿ ಒಂದು ವಿದ್ಯಾರ್ಥಿಗೃಹವನ್ನು ಸ್ಥಾಪಿಸುವ ವಿಚಾರವನ್ನು
ಅವರಿಗೆ ಹೇಳಲು, ಅದಕ್ಕೆ ಮಹಾಸ್ವಾಮಿಗಳವರು ಒಪ್ಪಿ, ಧನ ಸಹಾಯ
ಮಾಡುವೆವೆಂಬದಾಗಿ ವಚನ ಕೊಟ್ಟರು. ಆ ಮೇಲೆ ಚನ್ನಬಸವಪ್ಪನವರ ಅತಿ
ಸಂತೋಷದಿಂದ ಬೆಳಗಾವಿಗೆ ತಿರುಗಿ ಬಂದರು. ಒಬ್ಬ ಸಮಾಜ ಚಾಲ
ಕನಲ್ಲಿ ತೋರತಕ್ಕ ಗುಣಗಳೆಂದರೆ, ಇವೇ ಇರುತ್ತವೆ. ಅವನು ಶ್ರೇಷ್ಠ
ವಿಚಾರವುಳ್ಳವನಾಗಿ, ಅವುಗಳನ್ನು ಯಾರ ಮುಂದೆಯೂ ಪ್ರಕಟಿಸಲು
ಹಿಂಜರಿಯುವದಿಲ್ಲ. ಮತ್ತು ಅವುಗಳ ಪ್ರಯತ್ನಗಳಲ್ಲಿ ಯಾವಾಗಲೂ
ಆಸಕ್ತನಾಗಿದ್ದು ಜನರ ದೂಷಣೆಗೆ ಬೆದರುವದಿಲ್ಲ. ಇದಕ್ಕೆ ಅಸ್ಪೃಶ
ವಾದ ನೈತಿಕ ಧೈರ್ಯವು ಬೇಕಾಗುತ್ತದೆ. ಈ ಧೈರ್ಯವು ಚನ್ನಬಸ
ವಪ್ಪನವರಲ್ಲಿ ಸಂಪೂರ್ಣವಾಗಿತ್ತು.

ಆ ಮೇಲೆ ಚನ್ನಬಸವಪ್ಪನವರು ಬೆಳಗಾವಿಯಲ್ಲಿ ಒಂದು ಬಾಡಿಗೆ
ಮನೆಯನ್ನು ಹಿಡಿದು, ಅಲ್ಲಿ ಒಂದು ವಿದ್ಯಾರ್ಥಿ ಗೃಹವನ್ನು ಸ್ಥಾಪಿಸಿದರು.
ಆದರೆ ಆರಂಭದಲ್ಲಿ ವಿದ್ಯಾರ್ಥಿಗಳೇ ಕೂಡುವದು ಕಷ್ಟವಾಯಿತು. ಆದರೆ
ಅವರು ಶಾಳಾಖಾತೆಯಲ್ಲಿ ಡಿಪ್ಯೂಟಿಗಳಾಗಿದ್ದುದರಿಂದ ಯೋಗ್ಯ ಹುಡು
ಗರನ್ನು ಆರಿಸಿಕೊಳ್ಳಲು ಅವರಿಗೆ ಅನುಕೂಲವಾಗಿತ್ತು ಎಲ್ಲಾದರೂ
ಯೋಗ್ಯ ಹುಡಗರಿದ್ದರೆ, ಏನಾದರೂ ಉಪಾಯಮಾಡಿ ಅವರನ್ನು ಬೋ
ರ್ಡಿಂಗಿನಲ್ಲಿ ತಂದು ಸೇರಿಸುತ್ತಿದ್ದರು. ಈ ಮೇರೆಗೆ ಸ್ವಲ್ಪದಿವಸಗಳಲ್ಲಿ ಅವರು
೫೦ ಜನ ವಿದ್ಯಾರ್ಥಿಗಳನ್ನು ಕೂಡಿಸಿದರು. ಆಗಿನ ಕಾಲಕ್ಕೆ ಇಷ್ಟು ಜನ
ಲಿಂಗಾಯತ ವಿದ್ಯಾರ್ಥಿಗಳು ಸ್ವಲ್ಪ ದಿವಸಗಳಲ್ಲಿ ಕೂಡಿದ್ದು ಜನರಿಗೆ ಬಹಳ
ಸೋಜಿಗವೆನಿಸಹತ್ತಿತು. ಯಾಕಂದರೆ ಆಗಿನ ಜನರು ಲಿಂಗಾಯತ ಸಮಾಜ
ವು ವಿದ್ಯೆಯಲ್ಲಿ ಎಂದೂ ಮುಂದೆ ಬೀಳಲಾರದ್ದೆಂದು ಎಣಿಸುತ್ತಿದ್ದರು. ಮತ್ತು
ಕೆಲವರಂತೂ ಚನ್ನಬಸವಪ್ಪನವರು ೫೦ ಕತ್ತೆಗಳನ್ನು ಕೂಡಿಹಾಕಿ ಅವು



ಗಳಿಗೆ ದಿನಾಲು ಕರಾರೀ ಮಾಡಿ, ದಾಣೀ ತಿನಿಸಿ, ಜೋಪಾನಮಾಡಿದಮಾತ್ರ
ದಿಂದ ಅವು ಎಂದಾದರೂ ಕುದುರೆಗಳಾಗಬಹುದೋ, ಎಂದು ಅನೇಕ ರೀತಿ
ಹಾಸ್ಯಮಾಡಹತ್ತಿದರು. ಆದರೆ ಚನ್ನಬಸವಪ್ಪನವರು ಈ ತರದ ದೂಷ
ಣೆಗಳಿಗೆ ಕಿವಿಗೊಡದೆ ತಾವು ಹಿಡಿದ ಕಾರ್ಯದಲ್ಲಿ ತತ್ಪರರಾಗಿದ್ದರು.
ಅವರು ವಿದ್ಯಾರ್ಥಿ ಗೃಹದ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಇಟ್ಟರು.
ಸಾಕಷ್ಟು ಜನ ಅಡಿಗೆಯವರನ್ನೂ ಸೇವಕರನ್ನೂ ಕಾರಕೂನರನ್ನೂ ನೇಮಿ
ಸಿಕೊಂಡಿದ್ದರು. ಗಂಗಾಧರ ಮಡಿವಾಳೇಶ್ವರ ತೂರಮರಿ ಮತ್ತು ಮಡಿ
ವಾಳಯ್ಯ ಪಂಡಿತ ಇವರಿಬ್ಬರೂ ಬೋರ್ಡಿಂಗಿನ ಮೇಲ್ವಿಚಾರಕರಾಗಿದ್ದರು.
ಇವರೂ ಚನ್ನಬಸವಪ್ಪನವರೂ ಮೇಲಿಂದಮೇಲೆ ಅಲ್ಲಿಗೆ ಹೋಗಿ ವಿದ್ಯಾ
ರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಮಹಾಲಿಂಗಸ್ವಾಮಿಗಳವರು ಪ್ರತಿ
ತಿಂಗಳು ತಪ್ಪದೇ ೩೦೦ ರೂಪಾಯಿಗಳನ್ನು ಚನ್ನಬಸವಪ್ಪನವರಿಗೆ ಕಳಿ
ಸಿಕೊಡುತ್ತಿದ್ದರು. ಈ ಮೇರೆಗೆ ಈ ವಿದ್ಯಾರ್ಥಿ ನಿಲಯವು ಏಳಿಕೆಯ ಸ್ಥಿತಿ
ಯನ್ನು ಹೊಂದಹತ್ತಿತು. ಲಿಂಗಾಯತ ಸಮಾಜದಲ್ಲಿ ಪಾಶ್ಚಿಮಾತ್ಯ
ಶಿಕ್ಷಣದ ಪ್ರಥಮಾರಂಭವು ಇದೇ ಇರುತ್ತದೆ. ಆದರೆ ಈ ವಿದ್ಯಾರ್ಥಿ
ನಿಲಯವು ಬಹಳ ದಿವಸ ಬಾಳಲಿಲ್ಲ. ಅದರ ಮುಖ್ಯ ಪೋಷಕರಾದ
ಮಹಾಲಿಂಗ ಸ್ವಾಮಿಗಳವರು ಮುಂದೆ ೨ ವರ್ಷಗಳಲ್ಲಿಯೇ ಲಿಂಗೈಕ್ಯ
ರಾದರು. ಆದ್ದರಿಂದ ಈ ವಿದ್ಯಾರ್ಥಿ ನಿಲಯವನ್ನು ಸಾಗಿಸುವ
ಭಾರವು ಚನ್ನಬಸವಪ್ಪನವರ ಮೇಲೆಯೇ ಬಿತ್ತು. ಆದರೆ ಅವರು
ಧನಿಕರಾಗಿದ್ದಿಲ್ಲ. ಆದರೂ ಅವರು ತಮ್ಮ ಸ್ವಂತ ಖರ್ಚಿನಿಂದ ಕೆಲವು
ದಿವಸ ಬೋರ್ಡಿಂಗನ್ನು ಹಾಗೂ ಹೀಗೂ ಸಾಗಿಸಿದರು. ಎರಡನೆಯ
ವರು ಆವರಿಗೆ ಇದರಲ್ಲಿ ಯಾರೂ ಸಹಾಯ ಮಾಡಲಿಲ್ಲ. ಆಗ ಅವರು
ಸಾಲಮಾಡಿ ಹಣ ಪೂರೈಸಿದರು. ಮುಂದೆ ಹೀಗೆ ಸಾಲಮಾಡಿದ ಬಗ್ಗೆ
ಅವರ ಮೇಲೆ ಕೋರ್ಟಿನ ಡಿಕ್ರಿಗಳಾದವು. ಆಗ ಅವರು ಒಂದು ಮನೆ
ಯನ್ನು ಮಾರಿ ಆ ಡಿಕ್ರಿಗಳ ಹಣವನ್ನು ಮುಟ್ಟಿಸಿದರು. ಮುಂದೆ ಅವ
ರಿಗೆ ಧಾರವಾಡಕ್ಕೆ ವರ್ಗವಾಯಿತು. ಆದ್ದರಿಂದ ಆ ಬೋರ್ಡಿಂಗು ಅಷ್ಟಕ್ಕೆ
ನಿಂತು ಹೋಯಿತು. ಈ ಎಲ್ಲ ಸಂಗತಿಗಳ ಮೇಲಿಂದ ಚನ್ನಬಸವಪ್ಪ
ನವರು ಎಷ್ಟು ಸ್ವಾರ್ಥತ್ಯಾಗಿಗಳೂ ಉದಾರಿಗಳೂ ಸ್ವಸಮಾಜ ಹಿತಚಿಂ
ತಕರೂ ಆಗಿದ್ದರೆಂದು ತಿಳಿದು ಬರುತ್ತದೆ.

ಆದರೆ ಸ್ತುತ್ಯಕಾರ್ಯಗಳು ಮೊದಲು ಕೈಗೂಡದೆ ಅಷ್ಟಕ್ಕೆ ನಿಂತು ಬಿಟ್ಟರೂ ಅವುಗಳ ಪ್ರಯತ್ನಗಳ ಸುಪರಿಣಾಮಗಳು ಮಾತ್ರ ಅವುಗಳ ಗೂಡ ನಾಶವಾಗುವದಿಲ್ಲ. ಅವುಗಳ ಅಪಜಯದಲ್ಲಿಯೇ ಮುಂದಿನ ಜಯದ ಬೀಜಗಳು ಅಂಕುರಿಸಿಕೊಂಡಿರುವವು. ಈ ಮೇರೆಗೆ ಈ ವಿದ್ಯಾರ್ಥಿನಿಲಯವು ನಿಂತು ಹೋದದ್ದರಿಂದ, ಮುಂದೆ ಶಾಶ್ವತವಾದ ಒಂದು ಧನನಿಧಿಯನ್ನು ಕೂಡಿಸಬೇಕೆಂಬ ವಿಚಾರಗಳು ಜನರಲ್ಲಿ ಸಹಜಿಕವಾಗಿಯೇ ಹೊರಡಹತ್ತಿದವು. ಮುಂದೆ ಸ್ವಲ್ಪ ವರ್ಷಗಳಲ್ಲಿಯೇ ಕೈ. ವಾ, ಗುರುಸಿದ್ದಪ್ಪ ಬಸವಣ್ಣೆಪ್ಪ ಗಿಲಗಂಚಿಯವರೂ ರಾ. ಬ. ರುದ್ರಗೌಡಾ ಚನವೀರಗೌಡ ಅರಟಾಳ ಇವರೂ ಈಗಿನ ಧಾರವಾಡ ಲಿಂಗಾಯತ ವಿದ್ಯಾಭಿ ವೃದ್ಧಿ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆದರೆ ಯಾವ ಮಹಾನುಭಾವರು ತಮ್ಮ ಕೇವಲ ಬೋಧಾಶಕ್ತಿಯಿಂದ ಅಜ್ಞ ಜನರಲ್ಲಿ ತಕ್ಕ ವಿಚಾರಗಳನ್ನು ಹುಟ್ಟಿಸಿ, ಅವರನ್ನು ಸಮಾಜ ಕೆಲಸಕ್ಕೆ ಪ್ರೇರೇಪಿಸಿ ಮೊದಲು ಸಮಾಜಕ್ಕೆ ತಕ್ಕ ದಾರಿಯನ್ನು ತೋರಿಸಿ ಕೊಟ್ಟರೋ ಮತ್ತು ಪ್ರಾಥಮಿಕ ಹಾಗೂ ಆಂಗ್ಲೇಯ ವಿದ್ಯೆಯ ಮಹತ್ವವನ್ನು ತಮ್ಮ ಸಮಾಜದವರಿಗೆ ತಿಳಿಸಿಕೊಟ್ಟು ಅವರ ಭಾವೀ ಪ್ರಗತಿಯ ತಳಹದಿಯನ್ನು ಊಂದರೋ ಅಂಥ ಚನ್ನಬಸವಪ್ಪನವರು ಲಿಂಗಾಯತ ಸಮಾಜದವರಿಂದ ನಿರಂತರವಾಗಿ ಸ್ಮರಿಸಲ್ಪಡತಕ್ಕ ಮನುಷ್ಯರಾಗಿರುವರು.

ಈ ಮೇರೆಗೆ ಈ ವಿದ್ಯಾರ್ಥಿ ನಿಲಯವು ಮುರಿದು ಹೋದರೂ ಅದರಲ್ಲಿದ್ದ ಅನೇಕ ವಿದ್ಯಾರ್ಥಿಗಳು ಈ ಕಾಲಕ್ಕೆ ಸ್ಥಾಪಿಸಲ್ಪಟ್ಟಿದ ಬೆಳಗಾವ ಸರದಾರ ಹೈಸ್ಕೂಲಿನಲ್ಲಿಯೂ ಅಲ್ಲಿದ್ದ ನಾರ್ಮಲ್ ಸ್ಕೂಲಿನಲ್ಲಿಯೂ ತಮ್ಮ ಅಭ್ಯಾಸವನ್ನು ಸಾಗಿಸಹತ್ತಿದರು. ಅವರೆಲ್ಲರೂ ಬಹುತರವಾಗಿ ಬಡವರಿದ್ದದರಿಂದ ಅವರು ಹ್ಯಾಗಾದರೂ ಮಾಡಿ ಕಷ್ಟಬಟ್ಟು ಶಿಕ್ಷಣವನ್ನು ಸಂಪಾದಿಸಲಾರಂಭಿಸಿದರು. ಇವರಲ್ಲಿ ಅನೇಕರು ಮ್ಯಾಟ್ರಿಕ್ಯುಲೇಶನ್ನು ಮತ್ತು ಟ್ರೇನಿಂಗ ಕಾಲೇಜ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬೇರೆ ಬೇರೆ ಖಾತೆಗಳಲ್ಲಿ ಸೇರಿಕೊಂಡರು. ಮತ್ತು ಅನೇಕರು ಶಾಲಾಧ್ಯಾಪಕರಾದರು. ಈಗಿನ ಕಾಲಕ್ಕೆ ಈ ಸಂಗತಿಗಳು ಅತ್ಯಲ್ಪವೆಂದೆನ್ನಿಸಿಕೊಳ್ಳಬಹುದು. ಆದರೆ ಈ ಮೇರೆಗೆ ಪ್ರಯತ್ನ ಪೂರ್ವಕವಾಗಿ ಜರುಗಿಸಲ್ಪಟ್ಟ ಸುಧಾರಣಾ ಕಾರ್ಯಗಳು ಸಮಾಜದಲ್ಲಿ ಹೊಸವಿಚಾರಗಳನ್ನು ಹುಟ್ಟಿಸಲಿಕ್ಕೂ ಆತ್ಮೋನ್ನತಿಯ ಪ್ರಯತ್ನಗಳನ್ನು ಹಬ್ಬಿಸಲಿಕ್ಕೂ ಕಾರಣವಾಗು



ತ್ತವೆ. ಈ ಪ್ರಯತ್ನಗಳು ಆರಂಭದಲ್ಲಿ ಅತ್ಯಲ್ಪವಾಗಿ ತೋರಿದರೂ ಅವುಗಳ ಸುಪರಿಣಾಮಗಳು ಕ್ರಮೇಣ ಹಬ್ಬುತ್ತಹೋಗಿ, ಮುಂದೆ ಒಂದು ಪ್ರಚಂಡ ನದಿಯಂತೆ ಪ್ರವಹಿಸತೊಡಗುವವು

ಈ ಮೇರೆಗೆ ಚನ್ನಬಸವಪ್ಪನವರು ತಮ್ಮ ದೇಶಕ್ಕೂ ತಮ್ಮ ಸಮಾಜಕ್ಕೂ ಮಾಡಿದ ಕಾರ್ಯಗಳನ್ನು ವಿಸ್ತರಿಸಿದೆವು. ಇನ್ನು ಮೇಲೆ ಅವರಲ್ಲಿದ್ದ ಕೆಲವು ಅಪರೂಪ್ಯವಾದ ಗುಣಗಳನ್ನು ಸಂಕ್ಷೇಪವಾಗಿ ವಿವರಿಸಿ, ಈ ಚರಿತ್ರೆಯನ್ನು ಮುಗಿಸುತ್ತೇವೆ

ಚನ್ನಬಸವಪ್ಪನವರಲ್ಲಿ ಇದ್ದ ಮೇಲಾದ ಗುಣವೆಂದರೆ ಜಗತ್ತಿನಲ್ಲಿ ನಿಜವಾದದ್ದಾವುದೆಂಬದನ್ನು ತಿಳಿದುಕೊಳ್ಳಬೇಕೆಂಬ ಅವರ ಇಚ್ಛೆ. ಈ ಸತ್ಯಶೋಧದಲ್ಲಿ ಅವರು ಯಾವಾಗಲೂ ತತ್ಪರರಾಗಿದ್ದರು. ಆದ ಕಾರಣ ಅವರು ಹೋದ ಹೋದಲ್ಲಿ ವಿದ್ವಾಂಸರ ಕೂಡ ಸಂಭಾಷಣೆ ಮಾಡಲೂ ದೀರ್ಘ ವಿಚಾರದಲ್ಲಿ ತೊಡಗಲೂ ಪ್ರೀತಿಸುತ್ತಿದ್ದರು.

ಅವರಲ್ಲಿ ಈ ಸತ್ಯಶೋಧಕ ಗುಣವಿದ್ದದರಿಂದ, ಅವರು ಯಾವಾಗಲೂ ಗ್ರಂಥಾವಲೋಕನದಲ್ಲಿಯೇ ಕಾಲಕಳೆಯುವರು. ಅವರ ಲೈಬ್ರರಿಯು ಬಹಳ ದೊಡ್ಡದಾಗಿತ್ತು. ಆದರೆ ಅದರೊಳಗಿನ ಗ್ರಂಥಗಳೆಲ್ಲ ಬಹುತರವಾಗಿ ಗಣಿತ ಮತ್ತು ತತ್ವಜ್ಞಾನ ಈ ವಿಷಯುಗಳ ಮೇಲೆಯೇ ಇದ್ದವು. ಅವರು ಬೇರೆ ವಿಷಯುಗಳನ್ನು ಬಹುಶಃ ಪ್ರೀತಿಸುತ್ತಿದ್ದಿಲ್ಲ.

ಗಣಿತವು ಅವರ ಪ್ರೀತಿಯ ವಿಷಯವು. ಈ ವಿಷಯವನ್ನು ಅವರು ಆಮರಣ ಅಭ್ಯಾಸ ಮಾಡುತ್ತಿದ್ದರು. ಅವರಿಗೆ ಸ್ವಲ್ಪ ಅವಕಾಶ ದೊರೆವ ಕೂಡಲೆ ಅವರು ಈ ವಿಷಯದಲ್ಲಿ ಮಗ್ನರಾಗುತ್ತಿದ್ದರು. ಅವರು ಎಲ್ಲಾದರೂ ಗಣಿತಜ್ಞರನ್ನು ಕಂಡರೆ, ಅವರಿಗೆ ತಕ್ಕ ಮನ್ನಣೆಯನ್ನು ಕೊಡಲು ಬಹಳ ಮುಂದಾಗುತ್ತಿದ್ದರು. ಮತ್ತು ಅವರನ್ನು ತಮ್ಮ ಮಿತ್ರರಂತೆ ಪ್ರೀತಿಸುತ್ತಿದ್ದರು.

ಈ ಮೇರೆಗೆ ಅವರು ಸ್ವತಃ ವಿದ್ವಾಂಸರಿದ್ದರೂ ಅವರು ತಮ್ಮ ವಿದ್ವತ್ತೆಯನ್ನು ಬಚ್ಚಿಡಲಿಕ್ಕೆ ಎಂದೂ ಯತ್ನಿಸಲಿಲ್ಲ. ಅವರು ಅದನ್ನು ಜನರಿಗೆ ತಿಳಿಸಲಿಕ್ಕೆ ಯಾವಾಗಲೂ ಹವಣಿಸುತ್ತಿದ್ದರು. ಅವರು ಫಿರ್ತಿಯ ಮೇಲಿದ್ದಾಗ ಹಳ್ಳಿಯ ಜನರಿಗೆ ನಾನಾ ವಿಧವಾಗಿ ಬೋಧಿಸುತ್ತಿದ್ದರು. ಬೆಳಗಾವಿಯ ಬೋರ್ಡಿಂಗಿನಲ್ಲಿದ್ದ ವಿದ್ಯಾರ್ಥಿಗಳಿಗೆ ಗಣಿತ ವಿಷಯುವನ್ನು

ಸ್ವತಃ ಕಲಿಸುತ್ತಿದ್ದರು. ಪ್ರಸಂಗ ಬಂದರೆ, ಸಾರ್ವಜನಿಕ ಸಭೆಗಳಲ್ಲಿ ಭಿನ್ನ ಭಿನ್ನ ವಿಷಯಗಳ ಮೇಲೆ ವ್ಯಾಖ್ಯಾನಗಳನ್ನು ಕೊಡುತ್ತಿದ್ದರು. ಈ ಮೇರೆಗೆ ಅವರು ಅನೇಕ ರೀತಿಯಿಂದ ಜ್ಞಾನಪ್ರಸಾರದ ಬಗ್ಗೆ ಪ್ರಯತ್ನಿಸುತ್ತಿದ್ದರು.

ಅವರ ಈ ಕಾರ್ಯದಲ್ಲಿ ಅವರಲ್ಲಿದ್ದ ಸಮಯೋಚಿತ ಭಾಷಣ ಶಕ್ತಿಯೂ ಸ್ವಾಭಾವಿಕ ವಕ್ತೃತ್ವ ಗುಣವೂ ಬಹಳೇ ಸಹಾಯವಾಗುತ್ತಿದ್ದವು. ಕನ್ನಡ ಮರಾಠಿ ಮತ್ತು ಇಂಗ್ಲಿಷ ಭಾಷೆಗಳಲ್ಲಿ ಭಾಷಣ ಮಾಡುವ ಶಕ್ತಿಯು ಅವರಲ್ಲಿ ಮಿಗಿಲಾದದ್ದಿತ್ತು. ಅವರ ಭಾಷಣಗಳು ಉತ್ಸಾಹದಿಂದಲೂ ದೀರ್ಘವಿಚಾರಗಳಿಂದಲೂ ತುಂಬಿಕೊಂಡಿರುತ್ತಿದ್ದವು. ಆದ್ದರಿಂದ ಅವುಗಳನ್ನು ಕೇಳಲಿಕ್ಕೆ ಜನರು ಬೇಸರಿಯುತ್ತಿದ್ದಿಲ್ಲ. ಅವರ ಭಾಷಣಗಳಲ್ಲಿ ಬಿರಸು ನುಡಿಗಳು ವಿಶೇಷವಾಗಿದ್ದರೂ ಅವುಗಳಲ್ಲಿ ತೀಕ್ಷ್ಣತೆಯೂ ಮಾರ್ಮಿಕತೆಯೂ ಇರುತ್ತಿದ್ದವು.

ಚನ್ನಬಸಪ್ಪನವರು ಈ ಮೇರೆಗೆ ವಿದ್ಯಾಪ್ರಿಯರಾಗಿದ್ದುದರಿಂದ ವಿದ್ಯಾಪ್ರಿಯರೇ ಅವರ ಸ್ನೇಹಿತರಾಗಿದ್ದರು. ಇವರಲ್ಲಿ ವೆಂಕಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ, ಬಾಸೆಲ್ ಮಿಶನ್ ಸಂಘಕ್ಕೆ ಸೇರಿದ ರೆವ್ಹರೆಂಡ ಜೀಗ್ಲರ್ ಇವರೇ ಮುಖ್ಯರಾಗಿದ್ದರು. ಇವರೆಲ್ಲರೂ ಉತ್ತಮ ಕನ್ನಡ ಗ್ರಂಥಕಾರರೂ ವಿದ್ವಾಂಸರೂ ರಸಿಕರೂ ಆಗಿದ್ದರು.

ಚನ್ನಬಸಪ್ಪನವರು ಕಪಟಿಗಳಾಗಿದ್ದಿಲ್ಲ. ಅವರು ಹೊರಗೊಂದು ಒಳಗೊಂದು ಎಂದೂ ತೋರಿಸಲಿಲ್ಲ. ಅವರು ತಮ್ಮ ಮನಸ್ಸಿಗೆ ಬಂದದ್ದನ್ನೂ ಬಾರದನ್ನೂ ಯಾರೇ ಇರಲಿ, ಸ್ಪಷ್ಟವಾಗಿ ಅಂದುಬಿಡುತ್ತಿದ್ದರು. ಕಾಪಟ್ಯವು ದುರ್ಬಲ ಮನುಷ್ಯನ ಕರುಹು. ಆದರೆ ಚನಬಸವಪ್ಪನವರು ಬಹಳ ಯೋಗ್ಯತೆಯ ಮನುಷ್ಯರಾಗಿದ್ದದರಿಂದ ಅವರು ತಮ್ಮ ಅಭಿಪ್ರಾಯಗಳನ್ನು ಜನರ ಮುಂದಿಟ್ಟು ಆ ಪ್ರಕಾರ ಯಾವಾಗಲೂ ಪ್ರಯತ್ನಿಸುವರ

ಚನ್ನಬಸಪ್ಪನವರು ತೋರಿಕೆಯಿಂದಲೂ ಮಾತಿನಿಂದಲೂ ಕಠಿಣ ಹೃದಯವುಳ್ಳವರಾಗಿರಬಹುದೆಂದು ಭಾಸವಾಗುವಂತ್ತಿತ್ತು. ಆದರೆ ಅವರು ಬಹು ದಯಾಶೀಲರಾಗಿದ್ದರು. ಒಬ್ಬ ಶಾಲಾ ಮಾಸ್ತರನು ಯಾವದಾದರೊಂದು ತಪ್ಪು ಮಾಡಿದ ಮಾತ್ರದಿಂದ, ಅವರು ಅವನಿಗೆ ಅಹಿತವನ್ನೂ



ಎಂದೂ ಮಾಡುತ್ತಿದ್ದಿಲ್ಲ. ಅವರನ್ನು ಕೂಡಲೇ ಕ್ಷಮಿಸುತ್ತಿದ್ದರು ಎಷ್ಟೋ ಜನ ಮಾಸ್ತರರು ಚನ್ನಬಸವಪ್ಪನವರ ಈ ಗುಣವನ್ನು ಬಹಳ ಹೊಗಳುತ್ತಿರುವದನ್ನು ಈಗಲೂ ಅನೇಕರು ಕೇಳಿರಬಹುದು. ಆದ್ದರಿಂದ ಚನಬಸಪ್ಪನವರು ಬಹಳ ಲೋಕಪ್ರಿಯರಾಗಿದ್ದರು.

ಚನಬಸವಪ್ಪನವರು ಯಾರಲ್ಲಾದರೂ ತಪ್ಪುಗಳನ್ನು ಕಂಡರೆ, ಅವುಗಳನ್ನು ಅವರಿಗೆ ತಿಳಿಸಿ, ಅವರನ್ನು ಹಾದಿಗೆ ಹಚ್ಚಲು ಯಾವಾಗಲೂ ಪ್ರಯತ್ನಿಸುತ್ತಿದ್ದರು. ಅವರು ಆ ಮನುಷ್ಯನಿಗೆ ಸರಿಯಾಗಿ ಅತ್ಯಂತ ಮನೋವೇಧಕ ಮತ್ತು ಮಾರ್ಮಿಕ ಶಬ್ದಗಳಿಂದ ಸಿಟ್ಟುಮಾಡುತ್ತಿದ್ದರು. ಒಬ್ಬ ಮಾಸ್ತರನು ಅವರಿಗೆ—"ನಾನು ಕೆಲಸಮಾಡಲಿಕ್ಕೆ ಹತ್ತಿ ಇಂತಿಪ್ಪತ್ತು ವರ್ಷಗಳಾದವು. ನಾನೇನೂ ತಪ್ಪುಮಾಡಲಿಲ್ಲ. ಉತ್ತಮ ರೀತಿಯಿಂದ ಕೆಲಸಮಾಡಿರುತ್ತೇನೆ." ಎಂದು ಹೇಳಿ ತನಗೆ ಬಡತೀಕೊಡಬೇಕೆಂದು ಬೇಡಿಕೊಳ್ಳಲಾಗಿ, ಚನ್ನಬಸವಪ್ಪನವರು —"ನಾನು ತಪ್ಪುಮಾಡಿಲ್ಲ ಎಂದು ಅನ್ನಬೇಡ. ನಾನು ತಪ್ಪು ಮಾಡಿರುತ್ತೇನೆ; ಆದರೆ ಆ ತಪ್ಪು ಡಿಪ್ಯೂಟಿಯವರ ದೃಷ್ಟಿಗೆಮಾತ್ರ ಬಿದ್ದಿಲ್ಲ ಎಂದು ಅನ್ನು" ಎಂದು ಉತ್ತರ ಕೊಟ್ಟರು. ಮತ್ತೊಂದು ಸಾರೆ ಒಬ್ಬ ಹೆಡ್‌ಮಾಸ್ತರನು ನನ್ನ ಅಸಿಸ್ಟಂಟನು ನನ್ನ ಮಾತನ್ನು ಕೇಳದೆ ತನ್ನ ಮನಸ್ಸಿಗೆ ಬಂದಂತೆ ನಡೆಯುತ್ತಾನೆ. "ಎಂದು ಚನ್ನಬಸವಪ್ಪನವರ ಮುಂದೆ ದೂರಹೇಳಿದನು. ಅದಕ್ಕೆ ಅವರು ಆ ಹೆಡ್‌ಮಾಸ್ತರನ ಅಯೋಗ್ಯತೆಯನ್ನು ತಿಳಿದುಕೊಂಡು, ಅವನಿಗೆ— "ಹೀಗೊ, ಒಳ್ಳೇದು. ನೀನು ನಿನ್ನ ಮನಸ್ಸಿಗೆ ಬಂದಂತೆ ನಡೆಯುವೆಯೋ ಅಥವಾ ಬಾರದಂತೆ ನಡೆಯುವೆಯೋ? ಭೂಮಿಯ ಮೇಲಿನ ಜನರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ನಡೆಯುವರೋ, ಅಥವಾ ಬಾರದಂತೆ ನಡೆಯುವರೋ ಹೇಳು" ಎಂದು ಅನ್ನಲು. ಆ ಹೆಡ್‌ಮಾಸ್ತರನು ಇದರಿಂದ ತನ್ನ ಕೈಕೆಳಗಿನವರ ಬಗ್ಗೆ ಈ ರೀತಿಯಿಂದ ಪರಿಷ್ಕಾರ ಮುಂದೆ ಹೇಳದೆ, ಅವರನ್ನು ತಿದ್ದುಕೊಂಡು ಹೋಗಬೇಕೆಂದು ಇದರ ಅಭಿಪ್ರಾಯವೆಂದು ತಿಳಿದುಕೊಂಡು ಅಲ್ಲಿಂದ ಹೊರಟು ಹೋದನು.

ಈ ಮೇರೆಗೆ ಚನಬಸವಪ್ಪನವರು ಎರಡನೆಯವರ ದೋಷಗಳನ್ನು ಸ್ಪಷ್ಟವಾಗಿ ಹೊರಗೆಡುವುತ್ತಿದ್ದರೂ, ತಮ್ಮಲ್ಲಿದ್ದ ದೋಷಗಳನ್ನು ಎಡೆಯವರು ತೆಗೆದರೆ ಅವರು ಸಿಟ್ಟಾಗುತ್ತಿದ್ದಿಲ್ಲ. ಒಂದು ಸಾಲೆಯಲ್ಲಿ

ಪರೀಕ್ಷೆಯು ನಡೆದಿತ್ತು. ಆಗ ಚನ್ನಬಸವಪ್ಪನವರು ಮೇಲಿನ ಎತ್ತೆಯ ವರಿಗೆ ಗಣಿತ ಹೇಳಿ ಹೆಡ್‌ಮಾಸ್ತರನಿಗೂ ಆ ಗಣಿತ ಮಾಡಲಿಕ್ಕೆ ಹೇಳಿದರು. ಆಗ ಆ ಮಾಸ್ತರನು-- "ನಾನು ಇದನ್ನು ಮಾಡುತ್ತೇನೆ. ಆದರೆ ಒಂದುವೇಳೆ ಇದು ನನಗೆ ಬರದಿದ್ದರೆ, ನನ್ನ ವಿದ್ಯಾರ್ಥಿಗಳಲ್ಲಿ ನನ್ನ ಮಹತ್ವವು ಕಡಿಮೆಯಾಗಿ, ನನ್ನ ಕರ್ತವ್ಯಕ್ಕೆ ನೀವೇ ಭಂಗತಂದಂತಾಗು ವದಿಲ್ಲವೇ? ಈ ಮಾತು ನನಗೊಬ್ಬನಿಗಷ್ಟೇ ಅಲ್ಲ. ಎಲ್ಲ ಮಾಸ್ತರರಿಗೂ ಹತ್ತುತ್ತದೆ. ಈ ಸಂಗತಿಯು ವಿಷಯವಾಗಿ ದೊರೆಗಳವರು ವಿಚಾರ ಮಾಡತಕ್ಕದ್ದು" ಎಂದು ಅನ್ನಲಾಗಿ, ಚನ್ನಬಸವಪ್ಪನವರು—"ಅಹುದು, ಅಹುದು. ನೀನು ಹೇಳಿದ್ದು ನಿಜವು. ನಿನ್ನ ಮಾತು ಒಳ್ಳೇ ಸಾರವುಳ್ಳದ್ದು. ನೀನೆ ನನ್ನ ಗುರುವು" ಎಂದು ಹೇಳಿ ಆ ಮಾಸ್ತರನನ್ನು ಮುಂದೆ ಬಹು ಪ್ರೀತಿಸುವವರಾದರು.

ಚನ್ನಬಸಪ್ಪನವರು ತಮ್ಮ ಅಧಿಕಾರದಲ್ಲಿ ಯಾರಿಗೂ ಪಕ್ಷಪಾತ ಮಾಡುತ್ತಿದ್ದಿಲ್ಲ. ಎಲ್ಲರನ್ನು ಒಂದೇ ದೃಷ್ಟಿಯಿಂದ ನೋಡುತ್ತಿದ್ದರು. ಅವರ ತಮ್ಮಂದಿರಾದ ಸಣ್ಣಚನ್ನಬಸವಪ್ಪನವರು ಒಂದು ಶಾಲೆಯ ಮಾಸ್ತ ರರಾಗಿದ್ದರು. ಒಂದುವೇಳೆ ಚನ್ನಬಸಪ್ಪನವರ ಮನಸ್ಸಿಗೆ ಬಂದಿದ್ದರೆ ಅವರು ಅವರನ್ನು ಸುಲಭವಾಗಿ ಮೇಲೆ ಏರಿಸಬಹುದಾಗಿತ್ತು. ಆದರೆ ಅವರು ಅವರನ್ನು ಅವರ ಯೋಗ್ಯತೆಗಿಂತ ಹೆಚ್ಚು ಏರಿಸಲಿಲ್ಲ. ಅವರ ಈ ಸಮವರ್ತನೆಯನ್ನು ನೋಡಿ ಅವರ ಕೈಕೆಳಗಿನ ಜನರೆಲ್ಲರೂ ಅವರ ಬಗ್ಗೆ ಬಹು ಪೂಜ್ಯ ಬುದ್ಧಿಯುಳ್ಳವರಾಗಿದ್ದರು.

ಚನ್ನಬಸಪ್ಪನವರು ಬಹು ಉದಾರಗುಣವುಳ್ಳವರೂ ಅಂತಃಕರು ಣೆಗಳೂ ಆಗಿದ್ದರು. ಅವರು ಶ್ರೀಮಂತರಾಗಿದ್ದಿಲ್ಲ. ಆದರೂ ಅವರು ತಮ್ಮ ಶಕ್ತಿಯನ್ನು ಮೀರಿ ಅನ್ಯರಿಗೆ ಸಹಾಯ ಮಾಡುತ್ತಿದ್ದರು. ಹೋದ ಧಾತು ಸಂವತ್ಸರದಲ್ಲಿ ಕರ್ನಾಟಕ ಭಾಗದಲ್ಲಿ ಬಹು ಭಯಂಕರವಾದ ಬರ ಗಾಲವು ಬಿದ್ದಿತ್ತು. ಆಗ ಉಣಕಲ್ಲ ಗ್ರಾಮದಲ್ಲಿ ಅನೇಕರು ಕ್ರೈಸ್ತ ಮತವನ್ನು ಸೇರಲಿಕ್ಕೆ ಸಿದ್ಧರಾದದ್ದನ್ನು ಕೇಳಿ ಚನ್ನಬಸಪ್ಪನವರು ಅಲ್ಲಿಗೆ ಹೋಗಿ ಅವರಿಗೆ ತಕ್ಕ ಉಪದೇಶ ಮಾಡಿದ್ದಲ್ಲದೆ, ಅವರ ಹೀನಸ್ಥಿತಿ ಯನ್ನು ನೋಡಿ ಅವರಿಗೆ ನಾಲ್ಕೈದು ನೂರು ರೂಪಾಯಿಗಳ ವರೆಗೆ ದಾನಮಾಡಿದರು. ಇದೇ ಮೇರೆಗೆ ಅವರು ಹಳ್ಳಿಗಳಿಗೆ ಹೋದಾಗೆ ಶಾಲೆಯ ವಿದ್ಯಾರ್ಥಿಗಳಿಗೆ ಮಿಠಾಯಿಗಳನ್ನೂ ಇನಾಮುಗಳನ್ನೂ ತಮ್ಮ



ಖರ್ಚಿನಿಂದಲೇ ಕೊಂಡುಕೊಡುತ್ತಿದ್ದರು. ಬೆಳಗಾವಿಯಲ್ಲಿ ಅವರು ಸ್ಥಾಪಿಸಿದ ವಿದ್ಯಾರ್ಥಿ ಗೃಹಕ್ಕೆ ಹಿಂದುಗಡೆ ಧನಸಹಾಯವು ದೊರೆಯ ದಿರಲು ಅವರು ತಮ್ಮ ಕೈಯಿಂದಷ್ಟೇ ಅಲ್ಲ, ಸಾಲಮಾಡಿ ಅದಕ್ಕೆ ಹಣ ಪೂರೈಸಿದರು. ಇದು ಅವರ ಸ್ವಾರ್ಥತ್ಯಾಗವನ್ನು ತೋರಿಸುತ್ತದೆ. ಇದೇ ಮೇರೆಗೆ ಅವರು ತಮ್ಮ ಪಗಾರದೊಳಗಿಂದ ಉಳಿದ ಅಲ್ಪಸ್ವಲ್ಪ ಹಣವನ್ನು ಬಡವಿದ್ಯಾರ್ಥಿಗಳಿಗೆ ಇದರಂತೆಯೇ ವೆಚ್ಚಮಾಡಿಬಿಡುತ್ತಿದ್ದರು. ಆದ್ದರಿಂದ ಅವರು ಸಾಯುವಾಗ ಬಡವರಾಗಿಯೇ ಇದ್ದರು. ಈ ವರ್ತನೆಯು ಅವರ ವಿಶಾಲವಾದ ಶ್ರೇಷ್ಠ ಮನಸ್ಸನ್ನು ಪ್ರಕಟ ಪಡಿಸುತ್ತದೆ.

ಇದೇ ಮೇರೆಗೆ ಕೆಳಗೆ ಕಾಣಿಸಿದ ಸಂಗತಿಯು ಚನ್ನಬಸವಪ್ಪನವರ ಸರಳ ಮತ್ತು ಪ್ರಾಮಾಣಿಕ ಸ್ವಭಾವವನ್ನು ತೋರಿಸತಕ್ಕ ಒಂದು ಉತ್ತಮ ಉದಾಹರಣೆಯಾಗಿರುತ್ತದೆ. ಏನಂದರೆ:– ಅವರಿದ್ದ ಕಾಲಕ್ಕೆ ಧಾರವಾಡ ದಲ್ಲಿ ಒಂದು ಸರಕಾರೀ ಡಿಸ್ಟ್ರಿಕ್ಟ ಬುಕ್‌ಡಿಪೋ ಇರುತ್ತಿತ್ತು. ಅದರ ಮೇಲ್ವಿ ಚಾರಣೆಯು ಡಿಪ್ಯೂಟಿಯವರ ಕಡೆಗೆ ಇರುತ್ತಿತ್ತು. ಅಲ್ಲಿ ಮಾರಾಟಕ್ಕಾಗಿ ೮-೧೦ ಸಾವಿರ ರೂಪಾಯಿಗಳ ಪುಸ್ತಕಗಳು ಇರುತ್ತಿದ್ದವು. ಆ ಡಿಪೋದ ಕಾರಕೂನನು ಚನ್ನಬಸವಪ್ಪನವರಿಗೆ ತಿಳಿಯದಂತೆ ೪-೬ ವರ್ಷಗಳಲ್ಲಿ ೪-೫ ಸಾವಿರ ರೂಪಾಯಿಗಳನ್ನು ಅಪಹರಿಸಿಬಿಟ್ಟಿದ್ದನು. ಆದರೆ ಈ ಡಿಪೋದ ಜಮಾಖರ್ಚಿನ ಪುಸ್ತಕಗಳ ಮೇಲೆ ಚನ್ನಬಸವಪ್ಪನವರ ಸಹಿ ಇರುತ್ತಿತ್ತು. ಕಾಯದೆ ಪ್ರಕಾರ ಆ ಹಣದ ಬಗ್ಗೆ ಚನ್ನಬಸವಪ್ಪನವರು ಜವಾಬುದಾರರಾಗಿದ್ದರು. ಆದರೆ ಮುಂದೆ ಕಾರಕೂನನ ಮೋಸವು ಬಯ ಲಿಗೆ ಬರಲು ಅವನು ಎಲ್ಲಿಯೋ ಓಡಿಹೋಗಿ ಬಿಟ್ಟನು. ಆಗ ಅವನ ಜಾಮಿ ನುದಾರರ ಆಸ್ತಿಯಿಂದ ಆ ಎಲ್ಲ ಹಣವು ವಸೂಲು ಆಗದಿರಲು, ಚನ್ನಬಸವ ಪ್ಪನವರು:—"ಈ ಡಿಪೋದ ತಪಾಸಣೆಯು ನನ್ನ ಕಡೆಗೆ ಇದ್ದು ನಾನು ನನ್ನ ಹೆಡ್‌ಕ್ಲಾರ್ಕನನ್ನು ನಂಬಿ ಈ ಜಮಾಖರ್ಚಿನ ಪುಸ್ತಕಗಳ ಮೇಲೆ ಸಹಿ ಮಾಡಿದ್ದು ನನ್ನ ತಪ್ಪು ಇರುತ್ತದೆ. ನಾನು ಸ್ವತಃ ಈ ಲೆಖ್ಖವನ್ನು ತಪಾಸು ಮಾಡದಿದ್ದರೂ ಕಳೆದು ಹೋದ ಹಣಕ್ಕೆ ನಾನೇ ಜವಾಬುದಾರನಾಗಿದ್ದೇನೆ. ಆದ್ದರಿಂದ ನನಗೆ ಸಲ್ಲತಕ್ಕ ಪಗಾರದಲ್ಲಿ ನನ್ನ ಮನೆತನದ ವೆಚ್ಚಕ್ಕೆ ೬೦ರೂ ಪಾಯಿ ಮಾತ್ರ ಬಿಟ್ಟುಕೊಟ್ಟು, ಉಳಿದದ್ದನ್ನೆಲ್ಲ ಕಡಿಮೆ ಬಿದ್ದ ಹಣವನ್ನು ಮುಟ್ಟಿಸಿಕೊಳ್ಳುವದಕ್ಕಾಗಿ ಉಪಯೋಗಿಸಬೇಕು" ಎಂದು ಸರಕಾರಕ್ಕೆ ತಿಳಿಸಿದರು. ಆದರೆ ಸರಕಾರದವರು ಚನ್ನಬಸವಪ್ಪನವರಿಂದ ವಿದ್ಯಾಖಾ

ತಿಗೆ ಆಪ ವ.ಹತ್ತರ ಸಹಾಯವನ್ನು ಲಕ್ಷಕ್ಕೆ ತಂದು, ಆ ಹಣವನ್ನು ಅವ
ರಿಗೆ ಕ್ಷಮಿಸಿ ಬಿಟ್ಟರು.

ಚನ್ನಬಸವಪ್ಪನವರು ಅತ್ಯಂತ ನೈತಿಕ ಧೈರ್ಯವುಳ್ಳವರಾಗಿದ್ದರು.
ಯಾವಕಾಲದಲ್ಲೂ ಅವರಿಗೆ ಭೀತಿ ಎಂಬದು ಏನೂ ಇರಲಿಲ್ಲ. ತೇಜಃಪುಂಜ
ವಾದ ಅವರ ಈ ವರ್ತನೆಯು ಅವರ ಸ್ವಭಾವದಲ್ಲಿ ಒಡೆದು ಕಾಣುವಂತೆ
ಇದೆ. ಒಬ್ಬ ಮನುಷ್ಯನು ವಿದ್ವಾಂಸನೂ ದೊಡ್ಡ ಅಧಿಕಾರಿಯೂ ಶ್ರೀ
ಮಂತನೂ ಇರಬಹುದು. ಆದರೆ ಅವನಲ್ಲಿ ಈ ಬಗೆಯ ನೈತಿಕ ಧೈರ್ಯ
ವಿಲ್ಲದಿದ್ದರೆ ಅವನಿಂದ ದೊಡ್ಡಕಾರ್ಯಗಳಾಗವು. ಈ ಗುಣವು ಬರಬೇಕಾ
ದರೆ ಅವನಲ್ಲಿ ಸತ್ಯದ ಬಗ್ಗೆ ನಿಷ್ಕಪಟವಾದ ಪ್ರೀತಿಯು ಬೇಕು. ಮತ್ತು
ಆ ಸತ್ಯದ ಪ್ರಸಾರದ ಬಗ್ಗೆ ಭೀತಿಯುಳ್ಳವನಾಗದೆ ಅದಕ್ಕಾಗಿ ಹಿಂಸಿಸಲ್ಪ
ಡಲು ಸಿದ್ಧನಾಗಿರಬೇಕು. ಇಂಥವನು ಯಾವ ಸ್ಥಿತಿಯಲ್ಲಿದ್ದರೂ, ಅವನ
ವರ್ಚಸ್ಸು ಎಲ್ಲ ಜನರ ಮೇಲೆ ಉಳಿಯುವದು. ಇವೆಲ್ಲ ಗುಣಗಳು ಚನ್ನ
ಬಸಪ್ಪನವರಲ್ಲಿ ಸಂಪೂರ್ಣವಾಗಿದ್ದವೆಂಬದು ಅವರ ಅನೇಕ ಪ್ರಸಂಗ
ಗಳಲ್ಲಿಯ ವರ್ತನೆಯಿಂದ ವಾಚಕರಿಗೆ ತಿಳಿದು ಬರುವಂತೆ ಇದೆ.

ಚನ್ನಬಸವಪ್ಪನವರು ಸಂಭಾಷಣೆಯಲ್ಲಿ ಬಹು ಚತುರರು. ಮಾತ್ರ
ಕಥೆಗಳನ್ನು ಯುಕ್ತಿಯಿಂದಲೂ ರಸಿಕತನದಿಂದಲೂ ಆಡುವರು. ಜನರ,
ಇವರ ಮಾತುಗಳಿಗೂ ಅಭಿಪ್ರಾಯಗಳಿಗೂ ಬಹಳ ಮೆಚ್ಚುತ್ತಿದ್ದರು.
ಆದ್ದರಿಂದ ಅವರು ಎಲ್ಲರಲ್ಲಿಯೂ ಬಹು ಗೌರವವುಳ್ಳವರಾಗಿದ್ದರು.

ಚನ್ನಬಸಪ್ಪನವರಲ್ಲಿ ಜಾತಿವಿಷಯಕ ಮತ್ಸರ ಭಾವಗಳು ಏನೂ
ಇದ್ದಿದ್ದಿಲ್ಲ. ಅವರ ಧಾರ್ಮಿಕ ವಿಚಾರಗಳು ಅವರನ್ನು ಧರ್ಮಾಂಧರ
ನ್ನಾಗಿ ಮಾಡುವದು ಅಸಂಭವವಾಗಿತ್ತು. ಅವರು ಬೇರೆ ಜಾತಿಯವ
ರನ್ನು ಎಂದೂ ನಿಂದಿಸಲಿಲ್ಲ. ಆದ್ದರಿಂದ ಅವರು ಎಲ್ಲರಿಗೂ ಬೇಕಾಗಿ
ದರು. ಚನ್ನಬಸವಪ್ಪನವರಂಥ ಉದಾರ ವಿಚಾರವುಳ್ಳ ಮನುಷ್ಯನು ಜಾತ್ಯಾ
ಭಿಮಾನವನ್ನು ವಹಿಸುವದು ಅಸಂಭವವಿರುತ್ತದೆ.

ದೊಡ್ಡ ಮನುಷ್ಯರಿಗೆ ಸ್ತುತಿಪ್ರಿಯರಾಗುವ ಒಲವು ಬಹಳ ಇರು
ತ್ತದೆ. ತಾವು ಮಾಡಿದ ಮತ್ತು ಮಾಡುವ ಕಾರ್ಯಗಳು ಬಹು ದೊಡ್ಡ
ವೆಂಬ ಅಭಿಮಾನವು ಅವರಲ್ಲಿ ಸೇರಿ, ಯಾವಾಗಲೂ ಅವರು ತಮ್ಮ
ಹೆಮ್ಮೆಯಲ್ಲಿ ಇರುತ್ತಾರೆ. ಇಂಥವರ ಸುತ್ತಲು ಸ್ವಾರ್ಥಪರಾಯಣ



ರಾದ ಜನರು ನೆರೆದು ಅವರ ಮುಖಸ್ತುತಿಯನ್ನು ಮಾಡುತ್ತ ತಮ್ಮ
ಇಷ್ಟಕಾರ್ಯ ಸಾಧಿಸುವದರಲ್ಲಿ ತೊಡಗಿರುತ್ತಾರೆ. ಆದರೆ ಚನ್ನಬಸವಪ್ಪ
ನವರು ಇಂಥ ಮುಖಸ್ತುತಿಗೆ ಎಂದೂ ಉತ್ತೇಜನ ಕೊಡಲಿಲ್ಲ. ಇದು
ಕೆಳಗೆ ಕಾಣಿಸಿದ ಸಂಗತಿಯಿಂದ ಚನ್ನಾಗಿ ವ್ಯಕ್ತವಾಗುವಂತೆ ಇದೆ.
ಚನ್ನಬಸವಪ್ಪನವರು ಒಂದು ಊರಿಗೆ ಪರೀಕ್ಷೆಗೆ ಹೋದಾಗ್ಗೆ, ಒಬ್ಬ
ಮಾಸ್ತರನು ಅವರ ಮೇಲೆ ಕೆಲವು ಕವಿತೆಗಳನ್ನು ರಚಿಸಿ, ಕೆಲವು ಸಭ್ಯ
ಗೃಹಸ್ಥರ ಮುಂದೆ ಅವುಗಳನ್ನು ಮೊದಲು ಅಂದು ತೋರಿಸಿದನು.
ಅವರು ಅವುಗಳಿಗೆ ಸಂತೋಷಬಟ್ಟು, ನಾವು ಚನ್ನಬಸವಪ್ಪನವರಿಗೆ ಇದನ್ನು
ಹೇಳುವೆವು. ನೀವು ಅವರ ಮುಂದೆ ಇವುಗಳನ್ನು ಅಂದು ತೋರಿಸಿರಿ.
ಇದರಿಂದ ಅವರು ಸಂತೋಷಬಟ್ಟು ನಿಮಗೆ ಕಲ್ಯಾಣ ಮಾಡುವರು ಎಂದು
ಹೇಳಿದರು. ಆ ಮೇಲೆ ಅವರು ಚನ್ನಬಸವಪ್ಪನವರ ಮುಂದೆ ಈ ಪ್ರಸ್ತಾಪ
ತೆಗೆಯಲಾಗಿ ಅವರು— " ಹೀಗೋ ಬಹಳ ಸಂತೋಷ. ಇವೊತ್ತಿನ
ಸಾಯಂಕಾಲದಲ್ಲಿ ನೀವೆಲ್ಲರೂ ಕೂಡಿದಾಗ ಆ ಮಾಸ್ತರನು ಅವುಗಳನ್ನು
ಅಂದು ತೋರಿಸಲಿ. ನಾನು ಕೇಳುತ್ತೇನೆ" ಎಂದು ಹೇಳಿದರು. ಆ
ಮೇಲೆ ಸಂಜೆಗೆ ಎಲ್ಲರೂ ನೆರೆದ ಮೇಲೆ ಮಾಸ್ತರನು ಚನ್ನಬಸಪ್ಪನ
ವರ ಮುಂದೆ ಬಹಳ ಉತ್ಸಾಹದಿಂದ ತನ್ನ ಕವಿತೆಗಳನ್ನು ಅಂದು
ತೋರಿಸಲು, ಆಗ ಚನ್ನಬಸವಪ್ಪನವರುಃ – ನೀವೇ ಸ್ವತಃ ಈ ಕವಿತೆಗಳನ್ನು
ರಚಿಸಿರುವಿರೋ" ಎಂದು ಕೇಳಲು, ಮಾಸ್ತರನುಃ— " ಹೌದು, ನಾನೇ
ಇವುಗಳನ್ನು ರಚಿಸಿರುವೆನು " ಎಂದು ಅನ್ನಲಾಗಿ ಚನ್ನಬಸವಪ್ಪನವರುಃ--
" ಹಾಗಾದರೆ ನನ್ನ ನಾಸಿಕೆಯು 'ಸಂಪಿಗೆ ಹೂವಿಗೆ ಸರಿ' ಎಂದು ಬಣ್ಣಿ
ಸಿರುವಿರಿ. ಅದು ಹಾಗೆಲ್ಲಿ ಇದೆ? ಮುಖವನ್ನು ಹೀಗೆಯೇ ಬಣ್ಣಿಸಿರು
ವಿರಿ. ನಾನು ಬಹು ದಯವಂತನೆಂತಲೂ ಶಾಂತನೆಂತಲೂ ಹೊಗಳಿ
ರುವಿರಿ. ಆದರೆ ಈಗ ನನಗೆ ಸಿಟ್ಟು ಬಂದಿದೆ. ಇನ್ನೂ ಎಷ್ಟೋ ಬಗೆ
ಯಾಗಿ ದೇವರಿಗೆ ಸರಿಯೆಂದು ನನ್ನನ್ನು ವರ್ಣಿಸಿರುವಿರಿ. ಇದು ನಿಜ
ವೋ? ಅಂದ ಬಳಿಕ ನಿಮ್ಮ ಕವಿತೆಗಳೆಲ್ಲ ಸುಳ್ಳು. ದೋಷದವು. ಈ
ರೀತಿ ಸುಳ್ಳು ಯಾಕೆ ವರ್ಣಿಸಿದಿರಿ? ಸುಳ್ಳು ಯಾಕೆ ನುಡಿಯುವಿರಿ?
ಈ ಬಗ್ಗೆ ಬಹು ವೇಳೆ ವ್ಯರ್ಥ ಕಳೆದಿರಿ. ಮನೆಯಲ್ಲಿ ಒಂದು ಪಾವು
ಜೋಳ ಬೀಸಲಿಕ್ಕೆ ಹಿಡದಿದ್ದರೆ, ಅವರು ಬಹು ಸಂತೋಷದಿಂದ
ನಿಮಗೆ ರೊಟ್ಟೀ ಮಾಡಿ ಹಾಕುತ್ತಿದ್ದರು" ಎಂದು ಅವರಿಗೆ ಸಿಟ್ಟು ಮಾಡಿ

ದರು. ಆಗ ಮಾಸ್ತರನು ನಿರುತ್ತರನಾಗಿ ತನ್ನ ತಪ್ಪನ್ನು ಒಪ್ಪಿಕೊಂಡು ಇನ್ನು ಮುಂದೆ ಹೀಗೆ ಮುಖಸ್ತುತಿ ಮಾಡುತ್ತ ವ್ಯರ್ಥವಾಗಿಯೂ ಸುಳ್ಳುತನದಿಂದಲೂ ಕಾಲಹರಣ ಮಾಡೆನೆಂದು ಹೇಳಿಕೊಳ್ಳಬೇಕಾಯಿತು.

ಆದರೆ ಮನುಷ್ಯನಲ್ಲಿ ಅನೇಕ ಸದ್ಗುಣಗಳಿದ್ದರೂ ಅವನಲ್ಲಿದು ರ್ಗುಣಗಳಾದರೂ ಕೆಲವು ಮಟ್ಟಿಗೆ ಇದ್ದೇ ಇರುತ್ತವೆ. ಈ ಮೇರೆಗೆ ಚನ್ನಬಸವಪ್ಪನವರಲ್ಲಿ ಅನೇಕ ಉತ್ತಮೋತ್ತಮ ಗುಣಗಳಿದ್ದರೂ ಅವರಲ್ಲಿ ಹಲಕೆಲವು ದುರ್ಗುಣಗಳೂ ವ್ಯಸನಗಳೂ ಸಹ ಇದ್ದವು. ಇವುಗಳಲ್ಲಿ ವ್ಯಸನಗಳು ವ್ಯಕ್ತಿಮಾತ್ರಕ್ಕೆ ಸಂಬಂಧಪಟ್ಟಿರುವದರಿಂದ ಅವುಗಳನ್ನು ಇಲ್ಲಿ ವಿವರಿಸುವದು ಅಯುಕ್ತವು. ಆದರೆ ಇವೆಲ್ಲವೂ ಶ್ರೇಷ್ಠ ಗುಣಗಳ ಪ್ರಭಾವದಲ್ಲಿ ಅಡಗಿಹೋಗುತ್ತವೆ. ಮತ್ತು ಇಂಥ ಮನುಷ್ಯನು ಮರಣ ಹೊಂದಿದ ಮೇಲೆ ಅವರಲ್ಲಿದ್ದ ದುರ್ಗುಣಗಳು ಮರೆತು ಹೋಗಿ, ಅವರ ಸದ್ಗುಣಗಳ ಸುಪರಿಣಾಮಗಳು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದು ಅವನು ಜನರಿಗೆ ಹೆಚ್ಚಿಚ್ಚು ಪ್ರಿಯನಾಗುತ್ತ ಹೋಗುತ್ತಾನೆ.

ಚನ್ನಬಸವಪ್ಪನವರು ಸ್ವಾಭಾವಿಕವಾಗಿ ಕೋಪಿಷ್ಠರೂ, ತಾಳ್ಮೆಯಿಲ್ಲದವರೂ ಹಟಮಾರಿಗಳೂ ಒರಸು ಮಾತಿನವರೂ ಆಗಿದ್ದರು. ಆದ್ದರಿಂದ ಅವರು ತಮ್ಮ ಕೋಪದಲ್ಲಿ ಏನಾದರೊಂದನ್ನು ಮಾಡುವರು. ಆದರೆ ಆ ಕೋಪವು ಹೋದ ಮೇಲೆ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಯೋಗ್ಯಮಾರ್ಗಕ್ಕೆ ಹತ್ತುವರು. ಇದರಿಂದ ಅವರ ವರ್ತನೆಯಲ್ಲಿ ಅನೇಕ ಸಾರೆ ಚಂಚಲತೆಯು ಉತ್ಪನ್ನವಾಗುತ್ತಿತ್ತು ಮತ್ತು ಅನೇಕ ತಪ್ಪುಗಳೂ ಆಗುತ್ತಿದ್ದವು. ಒಮ್ಮೊಮ್ಮೆ ಅವರ ತೀಕ್ಷ್ಣವಾದ ಮಾತುಗಳು ಜನರ ಮನಸ್ಸಿಗೆ ಬಹಳ ಹತ್ತುತ್ತಿದ್ದವು. ಯಾಕಂದರೆ ಮನುಷ್ಯನಿಂದ ತಪ್ಪಾಗಿದ್ದರೂ ಅದನ್ನು ಒಪ್ಪಿಕೊಳ್ಳಲಿಕ್ಕೆ ಅವನಿಗೆ ಪ್ರಾಣ ಸಂಕಟ ಬರುತ್ತದೆ. ಇದು ಚನ್ನಬಸವಪ್ಪನವರ ಲಕ್ಷ್ಯಕ್ಕೆ ಬರುತ್ತಿದ್ದಿಲ್ಲ. ಅವರು ಅಂತ್ಯಾವಸ್ಥೆಯಲ್ಲಿದ್ದಾಗ್ಗೆ ಅವರ ಮಿತ್ರರಾದ ವೆಂಕಟ ರಂಗೋ ಕಟ್ಟಿಯವರು ಅವರನ್ನು ಕಾಣಲಿಕ್ಕೆ ಬಂದರು. ಆಗ ಅವರು—"ನಿಮಗೆ ಹ್ಯಾಗೆ ಅದೆ? ನಿಮ್ಮ ದೇಹದಲ್ಲಿ ಹ್ಯಾಗೆ ಅನಿಸುತ್ತದೆ?" ಎಂದು ಕೇಳಲು, ಅದಕ್ಕೆ ಚನ್ನಬಸವಪ್ಪನವರು—"ನನಗೆ ಈಗ್ಗೆ ಯಾವ ಸ್ಥಿತಿಯು ಬಂದಿರುವದೋ ಆ ಸ್ಥಿತಿಯು ನಿಮಗೆ ಬಂದಾಗ್ಗೆ ತಿಳಿಯುವದು" ಎಂದು



ಉತ್ತರ ಕೊಟ್ಟರು. ಈ ತರದ ತೀಕ್ಷ್ಣ ಮಾತುಗಳು ಅವರಿಗೆ ವಾಡಿಕೆಯಾಗಿದ್ದವು. ಆದರೆ ಇಂಥ ತೀಕ್ಷ್ಣ ಮಾತಿನಲ್ಲಿ ದುಷ್ಟ ಮನಸ್ಸು ಇರದ್ದರಿಂದ ಜನರು ಅವುಗಳನ್ನು ಕ್ಷಮಿಸುತ್ತಿದ್ದರು.

ಚನ್ನಬಸವಪ್ಪನವರು ಎತ್ತರವಾದ ಮೈಕಟ್ಟುಳ್ಳವರೂ ಸಾಮರ್ಥ್ಯವಂತರೂ ನಸುಗೆಂಪು ಬಣ್ಣದವರೂ ತೇಜಃಪುಂಜವಾದ ಮುಖಮುದ್ರೆಯುಳ್ಳವರೂ ಆಗಿದ್ದರು. ಅವರ ಉಡಿಗೆತೊಡಿಗೆಗಳು ಬಹಳ ಸಾದಾ ಇರುತ್ತಿದ್ದವು. ಅವರೊಬ್ಬ ದೊಡ್ಡ ಸರಕಾರೀ ಅಧಿಕಾರಿಗಳಂತೆ ಕಾಣದೆ, ಒಬ್ಬ ಹಳೇ ಪದ್ಧತಿಯ ಬಣಜಿಗನಂತೆ ಕಾಣುತ್ತಿದ್ದರು. ಅವರಿಗೆ ಡಂಭದ ಪೋಷಾಕು ಜಂಬದ ನುಡಿಗಳು ಸೇರುತ್ತಿದ್ದಿಲ್ಲ. ಚದುರಂಗದ ಮೇಲೆ ಅವರ ಪ್ರೀತಿಯು ಬಹಳ. ಅದರಲ್ಲಿ ಅವರು ಬಹಳ ಪ್ರವೀಣರಿದ್ದರು. ಅವರ ಊಟವಾದರೂ ಬಹಳ ಸಾದಾ ತರದ್ದಾಗಿರುತ್ತಿತ್ತು. ಅವರು ಫಿರ್ತಿಯ ಮೇಲೆ ಇದ್ದಾಗ ಸವಿಯಾದ ಊಟವನ್ನು ಇಚ್ಛಿಸುತ್ತಿದ್ದಿಲ್ಲ. ಅವರು ತಂಗಳ ರೊಟ್ಟಿಯನ್ನು ಹಳ್ಳದ ಇಲ್ಲವೇ ಭಾವಿಯ ದಂಡೆಯ ಮೇಲೆ ಕುಳಿತು ತಿಂದು ಮುಂದೆ ಹೋಗಲಿಕ್ಕೆ ಹಿಂದಾಗುತ್ತಿದ್ದಿಲ್ಲ. ಅವರು ತಮ್ಮ ಕೈಕೆಳಗಿನ ಜನರಿಂದ ಸರಬರಾಯಿಯನ್ನು ಎಂದೂ ಸ್ವೀಕರಿಸಲಿಲ್ಲ. ಒಬ್ಬ ಮಾಸ್ತರನು ನಮಗೆ ಹೇಳಿದ್ದೇನಂದರೆ, ಚನ್ನಬಸವಪ್ಪನವರು ಕಡ್ಲೀ ಗಿಡ ತರಲಿಕ್ಕೆ ತಮ್ಮ ಶಿಪಾಯಿಯ ಕೈಯಲ್ಲಿ ೨ ದುಡ್ಡು ಕೊಟ್ಟರು. ಆ ಶಿಪಾಯಿಯು ಈ ಬಗ್ಗೆ ಮಾಸ್ತರನನ್ನು ಕೇಳಲು ಅವನು ಒಂದು ದೊಡ್ಡ ಸಿವಡನ್ನು ತರಿಸಿಕೊಟ್ಟನು. ಆದರೆ ಆ ಸಿಪಾಯಿಯು ಎರಡು ದುಡ್ಡಿಗೆ ಇಂಥ ದೊಡ್ಡ ಶಿವಡು ತಂದು ಕೊಟ್ಟರೆ, ಸಾಹೇಬರು ಬಯ್ಯುವರೆಂದು ಹೇಳಿ ಎಷ್ಟು ಶಿವಡು ಬೇಕೋ ಅಷ್ಟೇ ಒಯ್ದನು. ಇದರ ಮೇಲಿಂದ ಚನ್ನಬಸವಪ್ಪನವರ ವರ್ತನೆಯು ಎಂಥ ಶ್ರೇಷ್ಠ ತರದ್ದಿತ್ತೆಂಬದು ತಿಳಿದು ಬರುವಂತೆ ಇದೆ.

ಈ ಮೇರೆಗೆ ಚನ್ನಬಸವಪ್ಪನವರಲ್ಲಿ ಅನೇಕ ಅಮೌಲ್ಯವಾದ ಗುಣಗಳಿದ್ದವು. ಆದ್ದರಿಂದ ಅವರು ತಮ್ಮ ನಾಡಿನವರಲ್ಲಿ ಬಹು ಪ್ರಿಯರಾಗಿದ್ದರು. ಅವರು ತಮ್ಮ ಜನರಲ್ಲಿ ಕೇವಲ ಒಬ್ಬ ಸರಕಾರೀ ಅಧಿಕಾರಿಯಂತೆ ವ್ಯವಹರಿಸದೆ, ಒಬ್ಬ ಶಿಕ್ಷಕ, ಒಬ್ಬ ಸಾರ್ವಜನಿಕ ಹಿತಚಿಂತಕ, ಒಬ್ಬ ಸುಧಾರಕ, ಒಬ್ಬ ದೇಶಾಭಿಮಾನಿ, ಒಬ್ಬ ಬೋಧಕನಂತೆ ವ್ಯವಹರಿ

ಸಿವರು. ಆದ್ದರಿಂದ ಅವರು ನಮ್ಮ ಕರ್ನಾಟಕಸ್ಥರು ಸದಾ ನೆನಿಸಲ ತಕ್ಕವರಾದ ಒಬ್ಬ ದೊಡ್ಡ ಮನುಷ್ಯರಾಗಿದ್ದಾರೆ. ಅವರು ಇನ್ನೂ ಹೆಚ್ಚ ದಿವಸ ಬಾಳಿದ್ದರೆ ಅವರು ಹೆಚ್ಚಿನ ಪದವಿಗೆ ಏರಿ ನಮ್ಮ ದೇಶಕ ಕಲ್ಯಾಣ ಮಾಡಬಹುದಾಗಿತ್ತು. ಯಾಕಂದರೆ ಅವರ ಮೇಲೆ ಸರಕಾ ದವರ ಮತ್ತು ಸ್ವಜನರ ಪ್ರೀತಿಯು ಸಂಪೂರ್ಣವಾಗಿತ್ತು. ಆದ ಅವರು ಬಹಳ ದಿವಸ ಬಾಳಲಿಲ್ಲ. ಅವರಿಗೆ ಬಹುಮೂತ್ರ ವಿಕಾರವ ಉಂಟಾಗಿ, ಅವರು ತಮ್ಮ ವಯಸ್ಸಿನ ೪೭ ನೆಯ ವರ್ಷದಲ್ಲಿಯೇ ಅಂದ ಸನ್ ೧೮೮೧ ನೇ ಇಸ್ವಿಯ ಜಾನೇವರಿ ೪ ನೇ ತಾರೀಖಿನ ದಿವಸ ಧಾ ವಾಡದಲ್ಲಿ ದೇಹವಿಟ್ಟರು.

ಅವರು ಈ ಮೇರೆಗೆ ಅಲ್ಪ ವಯಸ್ಸಿನಲ್ಲಿ ತೀರಿಕೊಂಡದ್ದಕ್ಕೆ ಆ ಕಾಲದ ಜನರು ಬಹಳ ಹಳಹಳಿಸಿದರು. ಅವರ ನಿಧನ ಸಮಯ ಒಬ್ಬ ಸಾರ್ವಜನಿಕ ದೊಡ್ಡ ಗೃಹಸ್ಥನಿಗೆ ಕೊಡಬೇಕಾದ ಮಾನಮರ್ಯಾ ದೆಗಳನ್ನು ಧಾರವಾಡ ಪಟ್ಟಣದೊಳಗಿನ ಎಲ್ಲ ಜಾತಿಯ ಜನರು ಕೊಟ್ಟ ಅವರ ಮೇಲಿದ್ದ ತಮ್ಮ ಪ್ರೀತಿಯನ್ನು ವ್ಯಕ್ತಗೊಳಿಸಿದರು. ಇಂಥ ಕರ್ತೃ ತ್ವಶಕ್ತಿಯುಳ್ಳ ಮಹಾ ಪುರುಷರು ನಮ್ಮ ಕರ್ನಾಟಕ ಭೂಮಿಯಲ್ಲಿ ಜನಿಸಲೆಂದು ನಾವು ಕೋರಿ ಈ ಚಿಕ್ಕ ಚರಿತ್ರೆಯನ್ನು ಸಮಾಪ್ತಿಗೊ ಸುತ್ತೇವೆ.

---